ಗರಿ

" ಅಂಬಿಕಾತನಯದತ್ತ "

ಸಮಾಜ ಪುಸ್ತಕಾಲಯ, ಧಾರವಾಡ.

13/5/63.

ಗರಿ

(ಕವನಸಂಕಲನ)

ಅಂಬಿಕಾತನಯದತ್ತ

ಸಮಾಜ ಪುಸ್ತಕಾಲಯ,
ಧಾರವಾಡ

೧ನೇ ಆವೃತ್ತಿ ೧೯೩೨
೨ನೇ ಆವೃತ್ತಿ ೧೯೪೫
೩ನೇ ಆವೃತ್ತಿ ೧೯೫೧
೪ನೇ ಆವೃತ್ತಿ ೧೯೬೦

ಬೆಲೆ : ರೂ. ೨.೦೦

ಮುದ್ರಣ : ಪ್ರಕಾಶನ
ಭಾಲಚಂದ್ರ ಘಾಣೇಕರ
ಪ್ರತಿಭಾ ಮುದ್ರಣ
ಸಮಾಜ ಪುಸ್ತಕಾಲಯ,
ಧಾರವಾಡ

ನಿವೇದನ—

ಗುರು ಚರಣಾರವಿಂದದಲ್ಲಿ

ಸಹೃದಯರಿಗೆ

ಮೊದಲನೆಯ ಆವೃತ್ತಿಗಾಗಿ ೧೯೩೧ರಲ್ಲಿ ಬರೆದದ್ದು

ಈ ಕಾವ್ಯಮಾಲೆಯೊಳಗಿನ ನನ್ನ ಕವನಗಳು ಇ. ಸ. ೧೯೧೮–೧೯೩೨ರ ವರೆಗೆ ಎಂದರೆ ಹೋದ ಹದಿನಾಲ್ಕು ವರ್ಷಗಳಲ್ಲಿ ಬರೆದವುಗಳು. ಎರಡು ಮೂರು ಕವನಗಳನ್ನು ಬಿಟ್ಟು ಉಳಿದೆಲ್ಲವೂ ಬರೆದ ಕಾಲದ ಕ್ರಮದಲ್ಲಿಯೇ ಇಡಲಾಗಿವೆ. ಇವುಗಳಲ್ಲಿ ಎಷ್ಟೋ ಈ ಮೊದಲೆ ಮಾಸಪತ್ರಿಕೆಗಳಲ್ಲಿ ಬೆಳಕು ಕಂಡಿದ್ದವು. ನಾನು ಮತ್ತು ನನ್ನ ಗೆಳೆಯರು ಇದರೊಳಗಿನ ಕೆಲವು ಕವನಗಳನ್ನು ಬೇರೆ ಬೇರೆ ಸಾಹಿತ್ಯಸಭೆಗಳಲ್ಲಿ ಹಾಡಿತೋರಿಸಿದ್ದೆವು. ಇದರೊಳಗಿನ ಕೆಲವು ಈಗಲೆ ಜನರ ಪ್ರೀತಿಯನ್ನು ಪಡೆದಿವೆ. ಈ ಸಂಗ್ರಹದಲ್ಲಿ ಕೆಲವು ತೀರ ಹೊಸ ಕವನಗಳೂ ಇವೆ. ಆದರೆ ಬಹಳ ಕವನಗಳನ್ನು ಒಂದೆಡೆಗೆ ಪ್ರಕಟಿಸಲು ಸಾಧ್ಯವಾಗಿರಲಿಲ್ಲ. ಹಾಗೆ ಪ್ರಕಟಿಸುವದು ಮಾತ್ರ ಅಗತ್ಯವಿತ್ತು. ಯಾಕಂದರೆ, ನನ್ನ ಕವನಗಳಲ್ಲಿ ಕೆಲವುಗಳನ್ನೆ ಓದಿ ಕೆಲವರು ಹೊಗಳಿದ್ದರು ಅಭಿಮಾನದಿಂದ, ಕೆಲವರು ತೆಗಳಿದ್ದರು ತಮ್ಮ ದೃಷ್ಟಿಯಿಂದ. ಏನೇ ಇರಲಿ, ಇಬ್ಬರಿಗೂ ಸಾಕಷ್ಟು ಅನ್ನವಿರಲಿ, ತೃಪ್ತಿಯಿರಲಿ. ಆನಂದದಿಂದ ಬಂದುದು ದುಃಖವನ್ನು ಕೊಡುವಂತಾಗುವದು ಒಂದು ದುರ್ವಿಲಾಸವಾದರೂ, ತಿಳಿಯದುದು ಸೇರದಂತಾಗುವದೂ, ಸೇರದುದು ನಿಂದೆಗೆ ಗುರಿಯಾಗುವದೂ ಸ್ವಾಭಾವಿಕವಾಗಿದೆ. ಆದರೆ ಸಹೃದಯರು ಸ್ವಭಾವಾಧೀನರಲ್ಲ. ಅವರ ಮಾತು ಹೊಗಳಿಕೆ ತೆಗಳಿಕೆಯದಲ್ಲ. ಅವರ ಅಮೃತದೃಷ್ಟಿಯು ಕವನಗಳ ಒರೆಗಲ್ಲು. ಅದಕ್ಕೆ ಗುರಿಯಾಗುವದೊಂದು ಅನುಗ್ರಹ, ಅದಕ್ಕೆ ಮರೆಯಾಗುವದೊಂದು ಶಾಪ. ಅಂಥ ಸಹೃದಯರ ಶಾಪಾನುಗ್ರಹದ ಗಾಳಿಯಲ್ಲಿ ಈ 'ಗರಿ'ಗಳನ್ನು ತೂರಿದ್ದೇನೆ.

'ನನ್ನ ಕವನ'ಗಳು ಎಂದು ಇದೀಗ ಹೇಳಿದೆನಷ್ಟೆ. ಅದೊಂದು ರೂಢಿಯ ಮಾತು. ಇವು ನನ್ನವಲ್ಲ; ಕನ್ನಡದ ಕವನಗಳು. ಕನ್ನಡದ ಅಶರೀರವಾಣಿಯು ಸಾವಿರ ಬಾಯಿಗಳಿಂದ ತನ್ನ ಕಣಸನ್ನು ಕನ್ನಡಿಸುತ್ತಿದೆ.

ಆ ಸಾವಿರ ಬಾಯಿಗಳಲ್ಲಿ ನನ್ನದೊಂದು; ಅದೆ ನನ್ನ ಧನ್ಯತೆ. ಕನ್ನಡದ ಪುನ ರ್ಜನ್ಮದ ಪ್ರಭಾತದಲ್ಲಿ ಹಾಡುವ ಕವಿಗಣದಲ್ಲಿ ನಾನೊಬ್ಬ. ಅದೆ ನನ್ನ ಅಚ್ಚುಮೆಚ್ಚು. ಹಾಗಿರದಿದ್ದರೆ ನನ್ನ ಕವನಗಳನ್ನು ಉಳಿದವರು ಓದಬೇಕೇಕೆ? 'ನನ್ನ ಕವನ, ಅವನ ಕವನ' ಎಂಬುದು ಸಟೆ. ಕನ್ನಡವು ತನ್ನ ಕವನ ಎನ್ನುವದಷ್ಟೆ ದಿಟ. ಒಂದೆ ಕಣಸನ್ನು ಹಲವು ಕಣ್ಣು ಕಾಣುತ್ತಿವೆ. ಒಂದೆ ಕಣಿಯನ್ನು ಹಲವು ಬಾಯಿ ಹಾಡುತ್ತಿವೆ. ಈ ಹಲವುಗಳಲ್ಲಿ ತೋರಿ ಮರೆ ಯಾಗುವ ಒಂದನ್ನು ಎಲ್ಲಿಯೋ ಎಲ್ಲರೂ ಅರಿತೇ ಹಲವನ್ನು ಬರಮಾಡಿ ಕೊಳ್ಳುವರು. ಇದರಲ್ಲಿ ಅಪ್ಪಿ ತಪ್ಪಿ ಬಂದ 'ನನ್ನ'ದೆಂಬ ಕಿಟ್ಟವು ಸಹೃದಯರ ಸಾರಸ್ವತ ಯಜ್ಞದಲ್ಲಿ ಸುಟ್ಟು ಕನ್ನಡದ ಚಿನ್ನವಷ್ಟೆ ಉಳಿಯುವದು. ಈ 'ಗರಿ'ಗಳನ್ನು ಅದಕ್ಕಾಗಿ ನೀಡಿದ್ದೇನೆ.

ಈ ಕವನಗಳೊಳಗಿನ ಭಾಷಾಶೈಲಿಯ ಬಗೆಗೆ ಒಂದು ಮಾತು. ಇಲ್ಲಿ ತುಂಗಭದ್ರೆಯ ಉತ್ತರಾಪಥದ "ದೇಶಿ"ಯ ಮಾರ್ಗವನ್ನು ಹುಡುಕುವ ಹಾಗೆಯೆ ಹುಟ್ಟಿಸುವ ಕುರುಹಿದೆ. ಹುಡುಕುವದಕ್ಕೆ ಹಾಯ್ದಾಡುವದರಿಂದಲೆ ಹಾದಿ ತಾನೆ ಹುಟ್ಟುವದು? ಪಂಡಿತ ಪಾಮರ, ಬಡವ ಬಲ್ಲಿದ, ನಾಗರಿಕ ನಾಡಾಡಿ ಎಂಬ ಭೇದವನ್ನಲ್ಲಗಳೆದು ಕನ್ನಡ ಜೀವಾಳವು ಕನ್ನಡಿಗರಿಗಾಗಿ ಕನ್ನಡಿಸಲ್ಪಡಬೇಕಾಗಿದೆ. ಹಾದಿ ಬಹಳ ಸುತ್ತು ಸುತ್ತು ಎನಿಸಬಹುದಾದರೂ ಎಲ್ಲವನ್ನೂ ಸುತ್ತದೆ ಗತಿಯಿಲ್ಲ. 'ದೇಶಿ'ಯ ಶಬ್ದಕೋಶಗಳು ಸಿದ್ಧವಾಗ ಬೇಕು; ಗಮಕಿಗಳು ಹಾಡಿ ತೋರಿಸಬೇಕು; ಸಹೃದಯರು ಅರ್ಥಮಾಡಿ ತೋರಿಸಬೇಕು; ರೂಢಶಾಸ್ತ್ರ–ಸಂಕುಚಿತ–ದೃಷ್ಟಿಯು ಹೋಗಬೇಕು; ಹೃದ ಯದ ವಿಶಾಲಮಾರ್ಗವು ತೆರೆಯಬೇಕು; ಮೈಸೂರು, ಧಾರವಾಡ, ಮಂಗ ಳೂರು ಎಂಬ ಭೇದವಡಗಿ, ಹಳ್ಳಿಪಳ್ಳಿಗಳಲ್ಲಿಯೂ ಹೆಣ್ಣು ಗಂಡು ಎಲ್ಲರೂ ಒಂದೆ ಕನ್ನಡವನ್ನು ಆಡಬೇಕು. ಆ ಕನ್ನಡದ ಬೀದಿಗೆ ಈ ಕನ್ನಡವು ಹಾದಿ. ಇದನ್ನು ತುಳಿಯದೆ ಅದು ದೊರಕದು· ಸಹೃದಯರಿಗೆ ಇಲ್ಲಿ ಶ್ರಮವೆನಿಸಿದರೂ ಅದು ವ್ಯರ್ಥ ಶ್ರಮವಲ್ಲ. ಅವರು 'ನಾವಲ್ಲಿ ಕಾಲಿಡಲಾರೆವು' ಎನ್ನುವ ವರೆಗೂ ಆ ಕನ್ನಡವೂ ಇಲ್ಲ, ಈ ಕನ್ನಡವೂ ಇಲ್ಲ. ಆದರೆ ಅವರು ಹಾಗೆ ಮಾಡಲಾರರು.

ಇಲ್ಲಿ ಶಬ್ದವಾಹನವು ಭಾವದೇವತೆಯನ್ನು ಹೊರಲು ಅಸಮರ್ಥವಾಗಿದೆ ಎಂದಾಗಲಿ, ಭಾವವು ರಸಪಾಕವನ್ನು ಹೊಂದಿಲ್ಲವೆಂದಾಗಲಿ ಅಭಿಪ್ರಾಯ ಪಡಬಹುದು. ಕನ್ನಡ ಮಾತಿನ ಕಸುವು, ಬಿಗುವು, ಆಳವು ಅಷ್ಟಿಷ್ಟಿಲ್ಲೆಂಬುದನ್ನು ವಾಚಕರು ಮರೆಯಬಾರದು; ಅದಕ್ಕೆ ಸಾವಿರ ವರ್ಷದ ಸಂಸ್ಕಾರವಿದೆ; ಸರಸ್ವತಿಯ ಸೆಲೆಯಿದೆ. ಇನ್ನು ಆಹಾರವು ಪಚನವಾಗಬೇಕಾದರೆ, ಅನ್ನದ ಪಾಕದಷ್ಟೆ, ತಿನ್ನುವವರು ನುರಿಸಬೇಕಾದುದು ಅಗತ್ಯ—ಎಂಬ ಮಾತು ಸಾಹಿತ್ಯದಲ್ಲಿಯೂ ಸತ್ಯವಾಗಿದೆ. 'ಸುಲಿದ ಬಾಳೆಯ ಹಣ್ಣನ್ನು' ನುರಿಸದೆ ನುಂಗಿದರೆ ರಸಪಾಕ ಹೊಂದುವದಿಲ್ಲ—ಇಷ್ಟೆ ಹೇಳಬಹುದು.

ಈ ಕವನಗಳನ್ನು ಮುದ್ರಣಕ್ಕಾಗಿ ಪ್ರತಿ ಮಾಡಿದವರು ಗೆಳೆಯ ನಾರಾಯಣ ಸಂಗಮ ಇವರು; ಮುದ್ರಣ ದೋಷಗಳನ್ನೂ ಬರವಣಿಗೆಯ ದೋಷಗಳನ್ನೂ ತಿದ್ದಿದವರು ಗೆಳೆಯ ಪ್ರಲ್ಹಾದ ನರೇಗಲ್ಲ ಮತ್ತು ಗೆಳೆಯ ಬೆಟಗೇರಿ ಕೃಷ್ಣಶರ್ಮರು; ಇದನ್ನು ಪುಸ್ತಕರೂಪದಲ್ಲಿ ತಂದ ಎಲ್ಲ ಶ್ರೇಯಸ್ಸು ಸಹೃದಯ ಮಿತ್ರರೂ ಕವಿಗಳೂ ಆದ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರರು ಇವರದು. ಇವರೆಲ್ಲರಿಗೂ ನಾನು ಋಣಿ.

ಅಂಬಿಕಾತನಯದತ್ತ

ಈ ಸಂದರ್ಭದಲ್ಲಿ ನಾನು ಕವಿಕಾವ್ಯಪಕ್ಷಪಾತಿಗಳಾದ ಶ್ರೀಗಳಾದ ಬಿ. ಎಮ್. ಶ್ರೀಕಂಠಯ್ಯನವರು, ಎಸ್. ಜಿ. ಶಾಸ್ತ್ರಿಗಳು, ರಾವ್‌ಬಹಾದ್ದೂರ್ ಡಾಕ್ಟರ್ ಸಿ. ಬಿ. ರಾಮರಾಯರವರು, ಬಿ. ಪುಟ್ಟಯ್ಯನವರು, ಸಿ. ಕೆ. ವೆಂಕಟರಾಮಯ್ಯನವರು, ಪಿ. ಎಚ್. ಕೃಷ್ಣರಾಯರವರು, ಟಿ. ಗೋವಿಂದರಾಯರವರು, ಬಿ. ಕೆ. ಗರುಡಾಚಾರ್ಯರು,—ಈ ಹಿರಿಯರು ಮತ್ತು ಮಿತ್ರರ ಇಷ್ಟವನ್ನು ನಡೆಯಿಸಿರುವ ನಿಮಿತ್ತಮಾತ್ರನಾಗಿದ್ದೇನೆ.

ಮಾಸ್ತಿ ವೆಂಕಟೇಶ ಐಯ್ಯಂಗಾರ

ಪರಿವಿಡಿ

೧. ಬೆಳಗು

(೧)

ಮೂಡಲ ಮನೆಯಾ ಮುತ್ತಿನ ನೀರಿನ
ಎರಕಽವ ಹೊಯ್ದಾ
ನುಣ್ಣ-ನ್ನೆರಕಽವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ—ಜಗವೆಲ್ಲಾ ತೊಯ್ದಾ.

(೨)

ರತ್ನದ ರಸದಾ ಕಾರಂಜೀಯೂ
ಪುಟಪುಟನೇ ಪುಟಿದು
ತಾನೇ—ಪುಟಪುಟನೇ ಪುಟಿದು
ಮಘಮಘಿಸುವಾ ಮುಗಿದ ಮೊಗ್ಗೀ
ಪಟಪಟನೇ ಒಡೆದು
ತಾನೇ—ಪಟಪಟನೇ ಒಡೆದು.

(೩)

ಎಲೆಗಳ ಮೇಲೇ ಹೂಗಳ ಒಳಗೇ
ಅಮೃತಽದ ಬಿಂದು
ಕಂಡವು—ಅಮೃತಽದ ಬಿಂದು
ಯಾರಿರಿಸಿರುವರು ಮುಗಿಲಽ ಮೇಲಿಂ-
ದಿಲ್ಲಿಗೇ ತಂದು
ಈಗ—ಇಲ್ಲಿಗೇ ತಂದು.

(೪)

ತಂಗಾಳೀಯಾ ಕೈಯೊಳಗಿರಿಸೀ
ಎಸಳೀನಾ ಚವರಿ
ಹೂವಿನ—ಎಸಳೀನಾ ಚವರಿ
ಹಾರಿಸಿಬಿಟ್ಟರು ತುಂಬಿಯು ದಂಡು
ವೈಯೆಲ್ಲಾ ಸವರಿ
ಗಂಧಾ—ವೈಯೆಲ್ಲಾ ಸವರಿ.

(೫)

ಗಿಡಗಂಟೆಯಾ ಕೊರಳೊಳಗಿಂದ
ಹಕ್ಕೀಗಳ ಹಾಡು
ಹೊರಟಿತು—ಹಕ್ಕೀಗಳ ಹಾಡು.
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು—ಕಾಡಿನಾ ನಾಡು.

(೬)

ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹ
ಸ್ಪರ್ಶಾ—ಪಡೆದೀತೀ ದೇಹ.
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ—ದೀ ಮನಸಿನ ಗೇಹಾ.

ಬೆಳಗು

(೭)

ಅರಿಯದು ಅಳವು ತಿಳಿಯದು ಮನವು
ಕಾಣಽದೋ ಬಣ್ಣಾ
ಕಣ್ಣಿಗೆ—ಕಾಣಽದೋ ಬಣ್ಣಾ
ಶಾಂತೀರಸವೇ ಪ್ರೀತೀಯಿಂದಾ
ಮೈದೋರಿ ತಣ್ಣಾ
ಇದು ಬರಿ—ಬೆಳಗಲ್ಲೋ ಅಣ್ಣಾ.

೨. ಆಹಹ ಸ್ವಾತಂತ್ರ್ಯದೇವೀ !

ದೇವ ಮಾನವರೆಲ್ಲ ಕಂಡ ಕನಸೇ
ಬಾರೆ, ಮನಸಿನೊಳು ನೆಲಸು ನನಸೇ
ನೆನಸುತಿಹೆ ಹಸಿದ ಚೇತನೆಯು ತಿನಿಸೇ
ಬಾರೆ, ನನ್ನ ಎದೆಯೊಳಗೆ ಜನಿಸೇ.

ಜೇನುಹನಿ ಜಿನುಗಾಗಿ ಹನಿವ ಜಗವೇ
ಬಾರೆ, ಮುಗಿಲನೀಸುತಿಹ ಖಗವೇ
ಜಿಂಕೆಯೊಲು ದೀಂಕಿಡುವ ಸೋಂಕು ಸೊಗವೇ
ಬಾರೆ, ನಗೆಯೊಗಿಸಿ ನಗುವ ಮೊಗವೇ.

ಸೆರೆಯೆಂಬ ಹಿರಿಹಾವ ಹಿಡಿದ ಹದ್ದೇ
ಬಾರೆ, ಬೆಳಕು ಕತ್ತಲೆಯ ಜಿದ್ದೇ
ಪರಮಪುರುಷನು ಜಗಕೆ ಕೊಟ್ಟ ಮುದ್ದೇ
ಬಾರೆ, ಪ್ರೀತಿಯುಗ ಬರುವ ಸದ್ದೇ.

ಮರಣವನು ಸಟೆಗೊಳಿಸುವಂಥ ಕಾವೇ
ಬಾರೆ, ನಂದನಭ್ರಮರ-ಭಾವೇ
ಸಮರದೊಳಗವತರಿಪ ಪಿಶ್ವಜೀವೇ
ಬಾರೆ, ಸೊಗಸುಳ್ಳ ಸುರರ ಸಾವೇ.

'**ಶೆಲೆ**' *ಯೊಳಗೆ ಸೆಲೆಯಾಗಿ ಹರಿದ ನೀರೇ
ಬಾರೆ, ಕಂಡ ಕಣೆಯನ್ನು ಸಾರೇ
ಕೃತಯುಗದ ಸಾಮ್ರಾಜ್ಯ ನೆಲಸಿ ತೋರೇ
ಕಣ್ಣ-ಕಟ್ಟಿರುವ ಧ್ರುವನ ತಾರೇ.

* ಶೆಲೆ (Shelley) ಎಂಬ ಆಂಗ್ಲ ಕವಿ.

೩. ಚಂದ್ರ

ತಿಂಗಳಿನ ಮಿತಿಮೀರಿದಿಮ್ಮಿನ
ತಂಗದಿರಗಳ ಸೊಗಡಿನಿಂ ಕಡು
ಕಂಗಳಿಗೆ ಜೊಂಪೇರಿ ಮುಗಿದಿಹ-
        ವಂಗಂಗಳೀಗ
ಸಿಂಗರದ ಸಿರಿ ಮಂಗಲದ ಝುರಿ
ಇಂಗಿಸೌ ನಿನ್ನಂತರಂಗದ
ಇಂಗಡಲಿನೊಡಲೊಳಗೆ ದಯೆಯಿಂ-
        ದಡಗಿಸುತಲೆನ್ನ.

ಎಂದಿನಿಂದಲು ಮನದಿ ಬಯಸುವೆ-
ನೆಂದು ಸೇರುತ ನೀಲನಿಲಯವ
ಚೆಂದ ಕಾಣುವ ಬಿಳಿ ಮುಗಿಲುಗಳ
        ಹಾಸಿಗೆಯ ಹಾಸಿ
ಎಂದು ಮಲಗುವೆ ನೋೕವ ನೆನಪನು
ನಂದಿಸಿ ಪರಾನಂದದಲಿ ನಸು-
ಗುಂದಿರುವ ಚಂದಿರಗೆ ಹೊಂದಿಸಿ
        ಕಂದಿರುವ ಕದಪ.

ಒಡಲ ಕಿಚ್ಚಿಗೆ ಬೆಂದರೂ ನೀ-
ನೊಡಲುರಿಗೆ ಮೊರೆಯಿಡುವ ಕಡಲನು
ಕಡುಪಿನೊಳು ಮುದ್ದಾಡಿ ರಮಿಸುವೆ
        ನಗೆಮೊಗವ ತೋರಿ

ಒಡನೆ ಮರುಗನು ಮರೆತು ನನ್ನಯ
ನುಡಿಯು ಪೊಡವಿಯ ಪಾಡುಗಂಬನಿ-
ಗಡಲ ಸೈಪಿಡಲೀಗ ನಿನ್ನೊಲು
ಹಾಡಾಗಿ ಮೂಡಿ.

ನಿನ್ನೊಳವು ನನ್ನೊಳಗೆ ಮೊಳೆಯಿತು
ನಿನ್ನ ಮಣಿಹವು ತಣಿಸಿತೆನ್ನನು
ತನ್ನ ದುಃಖವ ನುಂಗಿ ಪರದುಃ-
ಖವನು ಹಿಂಗಿಸುವ
ಚೆನ್ನಿಗಳು ಭೂದೇವಿ, ಆಕೆಯ
ನನ್ನಿಯಲಿ ಮಿಡಿಯಾದ ನುಡಿಗಳು
ನನ್ನ ನಾಲಗೆಯಲ್ಲಿ ಮೂಡಲಿ
ಪ್ರತಿಚಂದ್ರರಂತೆ.

೪. ಗಂಡುಸು - ಹೆಂಗುಸಿಗೆ

(೧)

ತಾಯೆ ಕನಿಮನೆಯೇ ನೀ ಅಕ್ಕ ಅಕ್ಕರತೆಯೇ
ಬಾಯೆನ್ನ ತಂಗಿ ಬಾ ಮುದ್ದು ಬಂಗಾರವೇ
ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ
ಮಗಳೊ ನನ್ನೆದೆಯ ಮುಗುಳೊ ?
ಈಯೆನ್ನ ಇರವಿಂಗೆ ಬೇವಸದ ಬಾಳಿಕೆಗೆ
ಈಯುತ್ತ ಕೈಮೈಗಳಂ ಜೀವಭಾವದಿಂ
ಸ್ತ್ರೀಯೆ ಕಾಪಾಡಿದೌ ಪಾಡಾಗಿ ಮೂಢನನು
ತಕ್ಕೈಸಿ ನೂರು ತೆರದಿ.

(೨)

ಮಂಗ ಮಾನಿಸನ ಕೂಡ ಜಂಗಮಜಗತ್ತಿನೊಳು
ದಂಗುಬಡಿದವನಾಗೆ ಸ್ಫೂರ್ತಿಯಾಗುತೆ ಬಂದು
ಹೆಂಗರುಳಿನಂದದಿಂ ಗದ್ದವಂ ಪಿಡಿದು ಮು-
ದ್ದಾಡಿ ಮುಂಗುರುಳ ತೀಡಿ
ತಿಂಗಳಿನ ಬೆಳಕ ಹೊಂಗೆಳತಿ ಜೊತೆಯಾದೆ ನೀ
ಕಂಗಳಿಗೆ ಕತ್ತಲೆಯೊಳಿದ್ದವಗೆ ಬೆಂದವಗೆ
ಮಂಗಲೆಯೆ ಸಂತೈಸಿದೌ ಕಾಂತೆ ಶಾಂತಿಯೇ
ಹೊದ್ದಿಕೆಯ ನಿದ್ದೆಯಾಗಿ.

(೩)

ತರುಣೆ ಸ್ವೈರಣೆ ನಚ್ಚು ಮೆಚ್ಚು ಮಮತೆಯು ನೇಹ
ಕರುಣೆ ಶ್ರುತಿಸ್ಮೃತಿ ಮತಿಯು ಕೀರ್ತಿ-ಧೀ-ಶ್ರೀರೂಪ
ತೆರೆಯಾಗಿ ತೂಗಿದೌ ಅಂತರಂಗವಿದೀಗ-
ಲಾದಿತು ತರಂಗಮಯವು.

ಹರೆಯುವಳಿಯದ ಜರೆಯು ಸಾವೆಂದು ತೋರ್ಪ ಬಿರಿ-
ಸೆರೆಯಿಂದ ಸತತ ನೀ ಬಿಡಿಸುವೆ ಜಗಜ್ಜನನಿ
ಶರಣು ಬಂದೆನು ಶರಣ್ಯಳೆ ಹೆಣ್ಣೆ ಸೃಷ್ಟಿಯೋ
ಸಲಹುವೆ ಧರಿತ್ರಿಯಾಗಿ.

(೪)

ಕನ್ನಡಿಯ ಒಳಗೆ ಪೆರಗನ್ನಡಿಯ ಪಡಿನೆಳಲು
ಕಣ್ಣೆದಿರುಗಣ್ಣಿನೊಳಗೊಬ್ಬರೊಬ್ಬರ ಗೊಂಬೆ
ಚೆನ್ನನಂತದ ಪಾಂಗು ನಮ್ಮಿಬ್ಬರೊಳಗೆ ಹ-
ಬ್ಬಿಹುದು ಅರಿದರಿದು ಹೆಣ್ಣೆ !
ನನ್ನ ನಿನ್ನಯ ಮನದ ಜೊನ್ನಮುಗ್ಗದ ಮೇಲೆ
ನಿನ್ನ ಮತ್ತೆನ್ನೆದೆಯ ಕಸೆಗೆ ಕಸೆಯನುಗೊಳಿಸಿ
ನನ್ನಿ ನೇಕಾರಿತಿಯು ಮುಗಿಯದಿಹ ಬಟ್ಟೆಯ-
ನ್ನನವರತ ನೇಯುತಿಹಳು.

೫. ಚತುರ್ಮುಖ ಸೌಂದರ್ಯ

(೧)

ಮೈಮುಟ್ಟಿ ಮನಮುಟ್ಟಿ ಬರುವೆ, ರೂಪವ ನೋಡಿ
ನೀ ಮೂಡಿ ಬುದ್ಧಿಯೊಳು ನೆಡುವೆ, ರಸವನು ಸವಿಯೆ
ಧೀಮೂಢತೆಯನೊಡೆದು ನಿಲ್ಲಿಸುವೆ ಚಿತ್ತವನು
ಚಿತ್ರಿಸಿದ ಬೊಂಬೆಯಂತೆ
ಈ ಮಾತುಗಳ ಗಾಳಿ ಕಿವಿಯ ಗವಿಯಲ್ಲುಲಿಯೆ
ಸೀಮಾತುಗಳ ಸೊನೆಯ ಸುರಿಸಿ ಎದೆಮುಗುಳಿಂದೆ
ನಾ ಮೂಸೆ ಸೂಸಿದ್ದೈ ಹಮ್ಮು ನೆಮ್ಮದಿಯಿಂದ
ಮೈಮರೆಯುವಂತೆ ಮಾಡಿ.

(೨)

ಜಗದ ಜಗುಲಿಯ ಕಟ್ಟೆಯೊಂದೆ ಕಾಲಲಿ ಮೆಟ್ಟಿ
ಜಿಗಿಜಿಗಿಯುತಿಹ ಸಪ್ತಸಾಗರಗಳಂ ಕಟ್ಟಿ
ನಗೆನಗುತಲೆದ್ದು ಹೊರಬಿದ್ದು ಮೇಲಕ್ಕೇರಿ
ಮರುತಲೋಕವನು ಮುಟ್ಟಿ,
ದಿಗಿಲೆದ್ದ ಗಾಳಿಗಳ ಗೂಳಿಗಳ ಬಿಗಿದಿಟ್ಟು
ಹಗಲ ಹೆಗಲಿನ ಮೇಲೆಯೊಂದು ಕಾಲನ್ನಿಟ್ಟು
ಮುಗಿಲಿನೊಳು ಮುಗಿಯದಂತಾಗಿ ಮೇಲಕೆ ಸಾಗಿ
ನಿಂತೆಯೊ ವಿರಾಟನಾಗಿ.

(೩)

ಕಂಡ ರೂಪಕ್ಕಿಂತ ಕಾಣದೊಡವೆಯ ಸೊಬಗು
ಉಂಡ ರುಚಿಗಳಿಗಿಂತ ಉಣ್ಣದಮೃತದ ಸವಿಯು
ಮಿಂದ ನೀರಿಂದಲೂ ಮೀಸಲಿರುವಂಥ ನೀ-
ರಿಂದ ಬಂದಂಥ ತಂಪು

ಅಂದ ಹಾಡಿಂದಲೂ ಬಂದ ಹಾಡಿನ ಸೊಗಸು
ಬಂದ ಗಂಧಕ್ಕಿಂತ ಬರಲಿರುವ ಹೂಗಂಪು
ಅಂದವದು, ಚೆಂದವದು, ಆನಂದಕಂದನದು
ಕಂದದದು ಕುಂದದೆಂದೂ.

(೪)

ಹೆಸರಾಜೆಗಿರುವ ಚೆಲ್ವಿಕೆಯು ನಿನ್ನಯು ಹೆಸರ
ಕುಸುರು ಕುಶಲತೆಯಿಂದಲೂ ಉಸಿರಲಳವುಂಟೆ
ಎಸೆವೆ ದಶದಿಶೆಗಳಲಿ ಮುಸಗಿ ಪೊಸಪೊಸ ತೆರದಿ
ಜಡಜೀವಜ್ಯೋತಿಯಿಂದ
ಒಸಗೆಯಾಯಿತು ಬಾಳು ಹೊಸತು ಕಂಡಿತು ಹಾಳು
ಬೆಸಲಾಯಿತೀಗ ಬಯಲೆಲ್ಲ, ಅಹ! ಬಗೆಸೊಲ್ಲ
ಬಸಿರು ಹಿಡಿಸದು, ಬಾಯಿಗೇನೊ ಬಂದಿತು, ಎಂದೆ
" ನಮೊ ಪರಾತ್ಪರನೆ " ಎಂದು.

೬. ಹಸಿ-ಹಂಬಲ

(೧)

ಬಣ್ಣ ಬಣ್ಣದ ಹಕ್ಕಿ ಹೊನ್ನ ರನ್ನದ ಮೋಡ
ನುಣ್ಣನೆಯ ಕಂಪ ಹೂ ತಣ್ಣನೆಯ ತಂಪುದೊರೆ
ಕಣ್ಣಮುಂದೆನ್ನ ಈ ತಾಳತಂತಿಯನರಿಯ-
        ದಂಥ ಸಂತೆಯನು ನೆರಸಿ
ಕಣ್ಣ ಕಟ್ಟಲು ಬಯಸುವುವು ಬಣ್ಣದಾಟದಲಿ;
ನನ್ನ ನೆತ್ತರು ಅವರ ತಾಳಮೇಳವ ಕೂಡಿ
ಭಿನ್ನ ಆಟದ ಮರವೆ ಮನಸಿಗಾಗುವ ವರೆಗೆ
        ಏನಿದ್ದರೇನು ನನಗೆ?

(೨)

ಬೇಸಗೆಯ ಬಿಸಿಲ ಹೂವಿನ ಜೇನಿನಿನಿಹನಿಯು
ಸೂಸಿ ಮೋಡದಿ ಹನಿವ ಮಿಂಚು ಮುತ್ತಿನ ತೊಟುಕು
ಹಾಸಸಾಗರನಾದ ಚಂದಿರನ ಚಂದ್ರಿಕೆಯ
        ಮೊಲೆಹಾಲಿನೊಂದೆ ಗುಟುಕು
ಈ ಸವಿಗಳನು ಸವಿದು ಸವೆದ ನಾಲಗೆಗೀಗ
ಯಾ ಸವಿಯು ಹತ್ತಿಹುದೊ? ಹಗಲಿರುಳು ಜಿನುಗುವುದು
ಆ ಸರಸ ಮಾತುಗಳ ಮಾತೆಯಾಗುವವರೆಗೆ
        ಏನುಂಡರೇನು ನನಗೆ?

(೩)

ರೋಮರಂಧ್ರಗಳರಳಿ ಶತಕೋಟಿ ಕಣ್ಣುಗಳು
ಆ ಮಹಾರೂಪ ಕಂಡಾ ಕಣಿಯನುಸಿರುವೆನು
ಸಾಮಗಾನದ ಸರಿಯು ನಿಸ್ಸೀಮ ಛಂದದೊಳು
        ಸಾಸಿರುಸಿರೀಗಳಾಗಿ

ಭೀಮವಿಕ್ರಮವಲ್ಲ! ಹಾಹಾದಿ ಹೂಹುಗಳ
ಸ್ತೋಮವಿದು—ತಿರುಹಾಡು ಸಾಕು! ಜೋರೆವಾಡುಗಳ
ಸೀಮೆಗಳ ಸಮ್ರಾಟನಾಗಿ ಆಳುವವರಿಗೆ
        ಏನಾದರೇನು ನನಗೆ?

(೪)

ಬಹಳ ಹೊತ್ತಿನ ತನಕ ಒಳಗೆ ಜೀವಾಳದೊಳು
ಸಹಿಸಲಾರದ ನೋವನನುಭವಿಸುವನಿತರೊಳು
ಅಹಹ! ಹೃದ್–ಬಂಧಗಳು ನಡುಗಿ ಸೊಲ್ಲುತ್ತಿಹವ-
        ದೇಕೊ ತಮ್ಮಿಂದ ತಾವೆ!
ಕಹಳೆಗಳ ಕೂಗಿನೊಲು ತುಂಬ ಹುರಿದುಂಬಿಸುವ
ಗಹಗಹಿಸಿ ನಗುತ ಬರುವವನು ಯಾರೋ ಇವನು?
ಅಹಹ! ಮುಪ್ಪಿನ ಹೆಗಲ ಹತ್ತಿ 'ಥಕ ಥೈ' ಎಂದು
        ಕಂದ ಕುಣಿದಾಡುವವನು.

೭. ಹಂಪೀ-ವಿಜಯನಗರ ದರ್ಶನ

(೧)

ತಾಳವಿಲ್ಲದಲೆ ಬೇತಾಳನಂದದಿ ಕುಣಿವ
ಕಾಳನರ್ತಕನ ಕಾಲ್ಕೆಳಗೆ ತೊತ್ತುಳಿಗೊಂಡು
ಹಾಳಾಗಿ ಹುಡಿಗೂಡಿ ಹೋದ ಕನ್ನಡ ನಾಡಿ-
ಗಿದಿರಾಗಿ ಬಂದು ನಿಂದು
ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು
ಬೀಳುಗಳ ಬದಿಬದಿಗೆ ಬೀಳುಗಳ ಬಾಳುಗಳು
ಕಾಳರಕ್ಕಸನ ಕಡೆಕೂಳು—ಬಾಳಕವಾದ
ನಾಡ ನಡುಮನೆಯು ಕಂಡೆ.

(೨)

ಕನಸೆನಲೊ, ಕಾಡುಪಾಲಾದ ಭೂಪಾಲಕನ
ಮನಸೆನಲೊ, ಮೋಡದೊಳು ಮೂಡಿ ಮುಸುಳುವ ಚಿತ್ರ
ವೆನಲೊ, ಕಂಪಡಗಿ ಪೆಂಪುಡುಗಿ ಬಣ್ಣವು ಕೆಟ್ಟ
ನಿರ್ಮಾಲ್ಯ ಮಾಲೆಯೆನಲೊ?
ನೆನಸಿ ಕೃತಕರ್ಮ ಪಶ್ಚಾತ್ತಾಪದಿಂ ಬೆಂದು
ಜನಿಸಿ ಸುಜ್ಞಾನ, "ಉದ್ಧಾರ ಮಾಡಿರಿ" ಎಂದು
ಮನಸಿಸಿಂಪೆರಗಿರುವನೆನಲೊ— ಪಾತಕಿ ಬಂದು
ಪಾವನನ ಚರಣಗಳಿಗೆ.

(೩)

ಬಿದ್ದ ರಾಜ್ಯವಿದಲ್ಲ ಉದ್ಬುದ್ಧವಾಗಿದ್ದು
ಎದ್ದ ರಾಜ್ಯದ ಮೊಳಕೆಯಿದು, ಇದರ ಬಳಿಯಲ್ಲಿ
ಇದ್ದು ಸಂಜೀವನದ ಜಪಿಸುವಂತಹ ಯೋಗಿ
ಕೊಂಪೆ ಹಂಪೆಯು ಇದಲ್ಲ.

ಬುದ್ಧಿಯೆಣಿಸಿತು, ಅಂತರಂಗದಧಿನಾಯಕನು
ಶುದ್ಧಿಯನು ಸೂರುವೊಲು ಬುದ್ಧಿಯನು ಮೀರುವೊಲು
ಎದ್ದು ಹೇಳಿದನೊ ಕಾ ಕನಕನೊಡೆಯನು ಪೇಳ್ದ
ಶುದ್ಧ ಮುಂಡಿಗೆಯಿದೆಂದು.

(೪)

ಕರ್ಮಯೋಗಿಯ ಬಳಿಗೆ ಯೋಗೀಶ್ವರನು ನಿಂದು
ಕರ್ಮದ ಅಕರ್ಮದೊಳಮರ್ಮಮಂ ತಿಳಿಸಿ ಸದ್-
ಧರ್ಮಮಂ ಸತತ ನಡೆಸಿದರೆ, ಧ್ರುವವಿಜಯವೆಂ-
ದೆಂದು ತೋರಿಸಿದ ತೆರದಿ.
ಧರ್ಮ–ಕರ್ಮದ ಪುರಾತನ ಪುರಗಳಿವು ಪೂರ್ವ
ಧರ್ಮಬಲದಿಂದೇರಿ ಕರ್ಮಬಲದಿಂದಿಳಿದು
ಮರ್ಮದೊಳು ನೆಡುವಂತೆ ಸಪ್ರಯೋಗಿಕವಾಗಿ
ಕಲಿಸುವುವು ತತ್ತ್ವವೆಂದು.

೮. ಲೀಲೆ

(೧)

ಹೊನ್ನ ಹೊಬಿಸಿಲ ಹಂದರದ ಕೆಳಗಾಡುವರು
ಚಿನ್ನ—ಚಿನ್ನೆಯರು ಚಿನ್ನಾಟವನು ಚೆಂದದಲಿ
ಹೊನ್ನ ಜೆಲೆ ಬಂತು ಮಣ್ಣಿಗೆ ಬಾಲಕರ ಕರ-
ಸ್ಪರ್ಶೇಂದ್ರಜಾಲದಿಂದ
ಮುನ್ನ—ಮುನ್ನಕೆ ಗುಬ್ಬಿಮನೆಯ ಹೂಡಿದ ಹಾಗೆ
ಹಿನ್ನೆಲೆಯೊಳಿದ್ದಂಥ ಮನೆಯು ಮಣ್ಣನು ಕೂಡಿ
ಮಣ್ಣಾಗಲಿಲ್ಲ, ಹೊಸಮನೆಗೆ ಇಂಬನು ಮಾಡಿ-
ತದು ವಿಫಲಕಾರ್ಯವಲ್ಲ.

(೨)

ಬಿಸಿಲುಗುದುರೆಯ ಹೂಡಿ ನನ್ನಯ ಮನೋರಥಕೆ
ದೆಸೆಯಿಲ್ಲದಂಥ ದಿಶೆಗೀಗ ದೂಡುವೆನದನು
ಮುಸೆಮುಸೆದು ತುಂಬುವೆನು ಬತ್ತಳಿಕೆಯನ್ನು ಹೊಸ
ಹೊಸ ವಿಚಾರಂಗಳಿಂದ
ದೆಸೆದೆಸೆಗೆ ಮುಗಿಲಿನೊಳು ದಶಲಕ್ಷ ಪುರಗಳಿವೆ
ಎಸೆಯುವೆನು ಗುರಿಯಿಲ್ಲದಲೆ, ಪರಿವೆ ಇಲ್ಲೆನಗೆ,
ಹುಸಿಯಾಗಲಾರವೆಂಬುದನರಿತೆ ಲೀಲೆಯಲಿ
ಯಾವುದೂ ವಿಫಲವಲ್ಲ.

೯. ಮುದ್ದಣ

(೧)

ಸಂಜೆ ಸೇರಿತು ಬಂದು ಕನ್ನಡದ ನಾಡಿನೊಳು
ಮಂಜು ಮುಸುಕಿದ ಮುಗಿಲು ಕತ್ತಲೆಯು ಗೂಡಿಸಿತೊ ?
ನಂಜೇರಿ ನಿದ್ದೆಗೈದಿತೊ? ಸತ್ತಿತೋ ಜೀವ?
ಮಿಡುಕಿಲ್ಲದಾಯಿತಾಗ.
ಮುಂಜಾವಿನವಳ ತಂಬೆಲರೊಡನೆ ಮುದ್ದಣನ
ಪುಂಜವಕ್ಕಿಕ್ಕಿ ಕೂಗಿದ ಮೇಲೆ ಆ ದನಿಯು
ಸಂಜೀವವೆಬ್ಬಿಸಿತು ಸಾಸಿಗರ ಹಿಂಜರಿಯ-
ದಂಥ ಚೈತನ್ಯವನ್ನು.

(೨)

ಬಿರುಸು ಮಾತುಗಳಿಂದ ಇಂಪು ಮಾತಿನ ತಂಪು
ಮರೆಸಿ ಮನಸಿನ ಸೊಗಸ ಕಳೆದು–ಹಿಂಗಿಸಿ–ಹೀರಿ
ಕೊರತೆಯಿಲ್ಲದ ಕನ್ನಡವನೊಡಕು ನುಡಿಗಳಿಹ
ಕೆಟ್ಟ ಕಟ್ಟಡಕ ಮಾಡೆ
ಹರಸುತ್ತ ಕಲ್ಲಾದ ಕನ್ನಡವ, ಜೀವಕಳೆ
ಬರಿಸುತ್ತ ಮಾತಿನೊಳು ಬಂದೆಯಾ ಮುದ್ದಣನ
ಸರಸತಿಯೆ! ಸತಿಯೆ! ಸುರಿಸುತ ಸರಸ ನುಡಿಗಳನು
ನಿನ್ನ ರಸಗಂಗೆಯೊಡನೆ.

(೩)

ಆ ಋಷಿಗಳು ಸೋಮರಸಪಾನದಿಂದಮರ-
ವಾದ್ಯಗಳ ಸಂಗೀತ ಮಾಂಕರಿಸಿ, ಸಾಮಗಳ
ಸಾಧ್ಯಮಾಡಿದ ಹಾಗೆ ನೀನಾಗ ಹೊರಟೆಯೋ
ಝೇಂಕರಿಸಿ ಕಾವ್ಯ–ಭ್ರಮರ.

ಹೃದ್ಯಗದ್ಯದ ಮದ್ಯ ಕುಡಿದು, ನೀರಸವಾದ
ಪದ್ಯರಚನೆಯು ವಧ್ಯವೆಂದೊರೆದ ನಿನ್ನ ಹೊಸ
ವಿದ್ಯೆಯಿಂ ಮುದ್ದುನುಡಿಗಳನಾಡಿ ಹೆಸರಿನೊಲು
ಮಾತು ನಿಜಮಾಡಿ ತೋರಿ.

(೪)

ಸತ್ಯ–ಪ್ರೀತಿಗಳಿಲ್ಲದೇ ಬಣಗುಮಾತಿನೊಳು
ವ್ರಾತ್ಯರಾಗಿದ್ದ ಭಟ್ಟಂಗಿಗಳ ಹಿಂಡಿಗೂ
ಮರ್ತ್ಯರಾದಂಥ ನರ–ಕವಿಗಳಿಗು ಕಲಿಸಿದೆಯೊ
ಚೆನ್ನಾಗಿ ಅಮರಕವಿಯೇ.
“ ಸತ್ಯದಲ್ಲಿಯೆ ಪ್ರೀತಿ, ಪ್ರೀತಿಯಲ್ಲಿಯೆ ಸತ್ಯ
ನಿತ್ಯ ನಿಜವಿದು ” ಎಂದು ಕಂಗಳರ ಜಂಗುಳಿಯ
ಪ್ರತ್ಯಯಕೆ ತಂದೆಯೋ ನಿನ್ನ ಮನದನ್ನೆಯೊಡ
ನನ್ನಿಮಾತುಗಳನಾಡಿ.

(೫)

ಹಳಸಿ ತಂಗೂಳಾದ ರೀತಿಗಳ ಹೀಗಳಿಸಿ
ಬಳಬಳಸಿ ಸವಿಗೆಟ್ಟ ನಲ್ಗತೆಯಂ ರಸವೆರಸು
ಬಳೆಸಿ ಪೇಳಿದನು ಒಳಹದುಳವನು ಹದಮಾಡಿ
ತನ್ನ ಮಿದುಮಾತಿನಿಂದ.
ಉಳಿಸಿದನು ಕನ್ನಡದ ಹೆಸರನ್ನು ಕಡೆತನಕ
ಗಳಿಸಿದನು ಸತ್ಕೀರ್ತಿಯನ್ನು ಕವಿಕುಲದೊಳಗೆ
ಕಳಿಸಿದನು ವೀರಮುದ್ದಣನು ನವಕೃತಿಯನ್ನು
ಜಗದೊಳಗೆ ‘ ಜನ್ನಗುದುರೆ ’.

೧೦. ಹರಕೆ

ಭೋಗಕ್ಕೆ ಮನಸೋತು ವಿಕಟ ವಿಟಗಣದಂತೆ
ಆಗಿರುವದೀಗ ನಾಡು,
ರೋಗಕ್ಕೆ ಮೈಸೋತು ಕೈಸಾಗದಾಗಿಹುದು
ಯೋಗಸ್ಥನಾಗಿ ಹಾಡು !
ಯೋಗಸ್ಥನಾಗಿ ಗಡ ಹಾಡುಗಳ ಹಾಡುತ್ತ
ಕನ್ನಡಿಗರೊಡನೆ ಆಡು;
ಯೋಗ–ಭೋಗದ ಭೂಮಿಯಾಗಿ ಸಾಗುವ ಹಾಗೆ
ಕನ್ನಡದ ನಾಡ ಮಾಡು !

೧೧. ಪುನರ್ಯೋಗಾರೂಢ

(ಸಂದರ್ಭ : ಮೇನಕೆಯು ಶಕುಂತಲೆಯನ್ನು ಬಿಸುಟುಹೋದ ಮೇಲೆ.)

ವಿಶ್ವಾಮಿತ್ರ :—

ಎಲ್ಲಿರುವೆನೆಲ್ಲಿರುವೆನೆಲ್ಲಿರುವೆ ನಾನೀಗ
ಕಲ್ಲಿರುವೆನೋ ಏನು ಮಣ್ಣಿರುವೆನೊ ?
ಹೀರಿ ಹೋಯಿತು ಓಜ ಹಾರಿ ಹೋಯಿತು ತೇಜ
ಏರಿರುವೆನೋ ನಾನು ಇಳಿದಿರುವೆನೊ ?

ಮುನ್ನ ನೋಡಿದ ನಾಡು, ಇನ್ನೂ ಇದೀಗ ನಾ
ನನ್ನ ಕಣ್ಣುಗಳಿಂದ ಕಂಡ ಕಡೆಯು
ಕಾಣದಾಯಿತು ದೃಷ್ಟಿ ಬಾಣವಾಯ್ತು ಸೃಷ್ಟಿ
ಹೆಣವಾದ ದೇಹದೊಳು ಬಿದ್ದಿರುವೆನು.

ಆಗೊ, ನನ್ನ ಪಾಪ ಪಾತರಗಿತ್ತಿ ರೂಪಾಗಿ
ಆಗೊ, ಆಗೋ, ಮೇಲಕ್ಕೆ ಸಾಗಿರುವದು;
ಅರರೆ ಈ ತಪ, ಪಾಪ ! ಪರದೇಶಿ.... ಹೆತ್ತವರ
ಗುರುತಿಲ್ಲದಾಗಿಲ್ಲಿ ಮಲಗಿರುವದು.

ದೇವರೆಲ್ಲರ ಹೇವ ಹಾಳುಗೆಡಿಸಿತು ನನ್ನ
ಕಾವರಾರಿಲ್ಲೆಂದು ತಿಳಿದಿರುವರೊ ?
ಆತ್ಮನೆಂಬೀ ಗರುಡನುತ್ಸಾಹದಿಂದ ಪರ–
ಮಾತ್ಮಗಭಿಮುಖನಾಗಿ ಹೊರಟಿರುವನು.

ರೆಕ್ಕೆಗಳ ಜೀವವಿರೆ ಹಕ್ಕಿ ಹೆದರುವದೇನು
ಕುಕ್ಕಿ ನೆತ್ತಿಯನದನು ಕೆಡಹಬಹುದೆ ?

ಗರಿಗೆದರಿ ಹಾರು; ಗರುಡಾತ್ಮ ಗಗನದೊಳೇರು !
ಅರೆಬೆದರಿ ಕುಳಿತಲ್ಲೆ ಕೂಡಬಹುದೆ ?

ಮಾಡು ಸಾಹಸಮಾಡು ! ಓಡು ದಿಕ್ತಟಗಳಿಗೆ
ಓಡು, ನಿನ್ನಯ ಹಾದಿ ನೀನೆ ನೋಡು.
ಬಿದ್ದ ಹಕ್ಕಿಗೆ ಮುಂದೆ ಗೆದ್ದ ಹಕ್ಕಿಯ ಪಟ್ಟ
ಸಿದ್ಧಿಗೊಯ್ಯುವ ಹಾದಿ ಶುದ್ಧ ಹೀಗೆ.

ಸ್ವರ್ಗಕೆಳೆಯುವ ಸಂದಿ-ಗೊಂದಿ ಸೇರುವರೇನು
ದುರ್ಗವಲ್ಲದ ಮಾರ್ಗ ಹಿಡಿವುದುಂಟೆ ?
ಅಷ್ಟಗಟ್ಟಲಿ ಬಂದು ಪುಂಡ ದೈವದ ಹಿಂಡು
ಸಡ್ಡೆಯಿಂದಲಿ ಮತ್ತೆ ಮೇಲೆ ಹೊರಟೆ.

ಭಲೆ ಭಾಪು ಭಾಪು! ಹಿಂಜಾಪು ಕಿತ್ತಲೆ ಎತ್ತು,
ಭಲೆ ಸಿದ್ಧಶಿಖರವನ್ನೇರು; ಹತ್ತು !
ಹವಣಿಕೆಯ ಭವಣೆ ಬೇಡೆಂದು ಬಳಲುವರುಂಟೆ ?
ಹವಣಿಕೆಯೆ ಹರುಷವಿಹ ಗಂಡುಮೆಟ್ಟು.

೧೨. ಸಂಕಲ್ಪ

ಇಂದಿಲ್ಲ ಮುಂದಿಲ್ಲ ಹಿಂದೆಯಿದ್ದಿರಲಿಲ್ಲ
ಎಂದಿಗೂ ಒಪ್ಪೆನಾಸನ್ನೆಯುವನು;
ಬಂದು ಬಂದದ್ದೆಲ್ಲ ಸಂದ ಪ್ರಸಾದವೆಂ–
ದೆಂದು ಉಣ್ಣುವೆ ನಿನ್ನ ನ್ಯಾಯವನ್ನು.

ತಿಳಿಯದಿದ್ದರು ಒಳಿತು, ತಿಳಿದರಂತೂ ಒಳಿತು,
ಹೊಳೆದು ಹೋಗಲಿಯೆಂದು ದಿಟ್ಟಿಸುವೆನು.
ಉಳಿದರಷ್ಟೇ ನಾನು ಅಳಿದರಷ್ಟೇ ನಾನು,
ಬೆಳಕಿನೊಡೆಯನೆ ನೀನೆ ಹುಟ್ಟಿಸಿದನು.

ಏನು ಆಗುವದೆಂದು ನಾನು ನೋಡುತ್ತೀಗ
ನೀನು ಮಾಡುವದನ್ನು ಜಪ್ಪಿಸಿಹೆನು.
ಜ್ಞಾನರೂಪನೆ ನೀನು ಜ್ಞಾನ ಹುಟ್ಟಿಸು ಎಂದು
ಜ್ಞಾನಸಾಧನವನ್ನೆ ಒಪ್ಪಿಸುವೆನು.

ಮಾಡುವದು ಬಿಡುವದೂ ಕೂಡಿಹುದು ನಿನ್ನನ್ನು
ಮಾಡು ಬಿಡು ನನ್ನ ಹಿತಬಂಧು ನೀನು !
" ಮಾಡಿಬಿಡು " ಎಂದು ಮಾತಾಡದಲೆ ಸಂಬಿರುವೆ
ಮಾಡಿ ಮಾಡಿಸುವವನೆ, ಬಲವ ನೀಡು !

P.B. Srinivas.

೧೩. ಅಭಯ ಯಾಚನೆ

ಆತುರದಿ ಹಾತೊರೆದು ಬಂದೆ 'ಅವ್ವಾ' ಎಂದು
ಯಾತರದು ಕಾತರವು ನಿನ್ನ ಬಳಿಗಿಂದು ॥ ಪಲ್ಲ ॥

ಪೆರತನದ ಹೆದರಿಕೆಯು ಹೃದಯದೊಳು ಹೊಕ್ಕಿಹುದು
ನರತನದ ಹುದುಲೊಳಗೆ ಜೀವ ಸಿಕ್ಕಿಹುದು;
ಹೊರತನದ ಬಲೆಯೊಳಗೆ ಬುದ್ಧಿ ಬಳಲಾಡುವದು
ಪರೆ! ನಿನ್ನ ಕಿಂಕರಗೆ ಅಭಯಕರ ನೀಡೌ!

ಎತ್ತಿತ್ತ ನೋಡಿದರು ಮತ್ತೆ ಬೇರೇ ಇಲ್ಲ
ಅತ್ತ ನೀನೇ ಮತ್ತು ಇತ್ತ ನೀನು;
ಸುತ್ತಿರುವ ಬೆದರಿಕೆಯು ಬಟ್ಟೆಯನು ಕಳೆದೊಗೆದು
ಬತ್ತಲಾದೆನು ಬಾಲನಂತೆ ನಾನು.

ಮುಚ್ಚಿಡುವದೇಕಿನ್ನು, ಬಚ್ಚಿಡುವದಿನ್ನೆಲ್ಲಿ,
ಮುಚ್ಚುಮರೆ ಮಾಳ್ಪುದಕೆ ಮುಸುಕು ಇಹುದೆಲ್ಲಿ ?
ನೆಚ್ಚುಮೆಚ್ಚುಗಳನ್ನು ಬಿಚ್ಚುಜೀವದೊಳೊತ್ತಿ
ಹೊಚ್ಚಿ ಪ್ರೀತಿಯ ಸೆರಗ ಎತ್ತಿಕೋ ಎನ್ನ.

೧೪. ಶಕ್ತಿ

ನಿನ್ನ ನಾಲಗೆಯನ್ನು ತನ್ನ ಮಂಚಕ ಮಾಡಿ
ನಿನ್ನ ತುಟಿಗಳ ತನ್ನ ತಲೆಗಿಂಬು ಮಾಡಿ
ತನ್ನ ಪದಗಳ ನಿನ್ನ ಕಂಠದೇಶದಲಿಟ್ಟು
ಚೆನ್ನೆ ಸರಸತಿ ನಿತ್ಯ ಪವಡಿಸುವಳಾಡಿ.

ನಿನ್ನು ದರದಂಗಳವು ರಂಗಮಂಡಲವಾಗೆ
ನಿನ್ನಂತರಂಗ ಮಜ್ಜನಶಾಲೆ ಮಾಡಿ
ನಿನ್ನ ಮೊಲೆಮಲೆಗಳಲಿ ನಿತ್ಯ ಹಾಲನ್ನುಂಡು
ನನ್ನಿ! ದುರ್ಗೆಯು ತಾನು ಪವಡಿಸುವಳಾಡಿ.

ನಿನ್ನ ಮುಡಿಹೂ, ಚಿಕ್ಕೆ; ಹಣೆ, ಚಂದ್ರ; ಕಣ್ ಜೊನ್ನ
ನಿನ್ನ ನಗೆಯನೆ ತನ್ನ ಹಗಲು ಮಾಡಿ,
ನಿನ್ನ ಪದಕಮಲಗಳೆ ತನ್ನ ಅರಮನೆಯಾಗೆ
ರನ್ನೆ ಲಕ್ಷ್ಮಿಯು ಅಲ್ಲಿ ಪವಡಿಸುವಳಾಡಿ.

ನಿನ್ನ ನೆನವೇ ನನಗೆ ಪ್ರತಿ ಪ್ರತಿಭೆಯಾಗಿರಲು
ನಿನ್ನ ಮೂರ್ತಿಯ ಕಾವ್ಯವಸ್ತು ಮಾಡಿ,
ಇನ್ನು ಮುನ್ನಿನ ಜನ್ಮ ಹಾಡಿ ಉದ್ಧರಿಸುವೆನು
ನಿನ್ನ ತೊಡೆಯಿರಲೆನಗೆ ಪವಡಿಸಲು ಆಡಿ.

೧೫. ತರುಣ ತಪಸ್ವಿ

ಸೆರೆಮನೆಯಲ್ಲಿದ್ದ ಅಹಿಂಸಾ ವ್ರತದ ತರುಣ ತಪಸ್ವಿಯೊಬ್ಬನು ನಾಲ್ಕಾರು ತಿಂಗಳ ಯಾತನೆಗಳಿಂದ ಭೀತನಾಗಿ ಮುಂಗಾಣದೆ ಹಿಂದೆ ಮುಂದೆ ನೋಡಿ ತನ್ನಷ್ಟಕ್ಕೆ ತಾನೆ—

ಕಾಯವೇ ನುಡಿಯು ಜೆಂಬತ್ತೆಲ್ಲಿ ಬಂದೆ ?
ಪ್ರಾಯವೇ ಏನು ಬಗೆ ಮರುಳಾಗಿ ತಂದೆ ?
ಇಲ್ಲಿ ಗಾಳಿಯೆ ಸೊಕ್ಕಿ ತಿಕ್ಕಿ–ಮುಕ್ಕುವದು
ಇಲ್ಲಿ ದೇಹವೆ ಕುಕ್ಕಿ–ಕುಕ್ಕಿ ಒಕ್ಕುವದು
ಇಲ್ಲಿ ನೆಲವೇ ಎದ್ದು ಬಂದು ಬಡಿಯುವದು
ಇಲ್ಲಿ ಜೀವವೆ ಕೂತು ಪ್ರಾಣ ಕುಡಿಯುವದು.
ಏನು ಭರವಸೆಯಿಂದ ಬಂದೆ ನಾನಿಲ್ಲಿ
ಏನು—ಭರವಸೆಗೆ ಆಧಾರವಿಲ್ಲೆಲ್ಲಿ ?
ಬಡಕ ದೇಹದ ಬುಡಕೆ ಒಡಕ ಮನಸಿಹುದು
ಕುಡುಕ ಬುದ್ಧಿಯು ಮುಂದೆ ಕೆಡುಕು ಕನಸಿಹುದು.
ಇದ್ದ ಹಾದಿಯು ಬಿಟ್ಟು ಅಡ್ಡ ಬಿದ್ದು
ನಿದ್ದೆಯೊಳು ಹೊರಟನೋ ಗುಡ್ಡವಿದಿರಿದ್ದು !
ಇಲ್ಲ ! ಯಾನದೊ ಒಂದು ನಸುಕಿನೊಳು ಹೊರಟೆ
ಅಲ್ಲ ! ನನ್ನ ವಿಚಾರ ಹಾಳು ಹರಟೆ.
ಇಗೊ—ನನ್ನ ಮನದ ಬೆಳಕಿಂಡಿಯೊಳಗಿಂದ
ಅಗೊ–ಕಂಡೆ–ಕಾಣುವದು ಬೆಳಕಿನಂದ.

ಈ ಸ್ಥಿತಿಯಲ್ಲಿ ನಿದ್ದೆ ಹತ್ತಲು ಕನಸಿನಲ್ಲಿ ಯಾರೋ—

ನೋಡು ನೋಡೋ ಕಂದ ನಿನ್ನನ್ನು ತಂದ
ನೋಡು,—ಆನಂದ ಚೆಂದದ ಬೆಳಕಿನಂದ.
ಕತ್ತಲಿಲ್ಲದ ಠಾವಿನಲಿ ಮೆರೆವ ದೀಪ
ಇತ್ತಿಲ್ಲಿ ನೋಡು ಬಾ—ಬಾ ಸಮೀಪ.

ಕತ್ತಲೆಗೆ ಕಣ್ಣು ಕೊಡುವಂಥ ಜ್ಯೋತಿ
ಇತ್ತಿರುವದಿತ್ತ ಬಾ ಹುಡುಕಿ ಸೋತಿ.
ಸೂರ್ಯವಂಶದ ಚಂದ್ರನಂತೆ ನೀನು
ಆರ್ಯಕುವರನೆ ಮೃಗದ ಹಿಂದೆ ಬಂದೇನು ?
ನಿನ್ನ ಪರಪ್ರಾಣವನು ಕಳೆದುಕೊಂಡು
ಚಿನ್ನ ! ನಿನ್ನಯ ಮನಸು ಭ್ರಮಿಸುವದೆ ಇಂದು ?
ಕೇಳು ! ಏನೇ ಇರಲಿ ವಿಜಯಿ ನೀನಹುದು,
ತಾಳ ಸೂಲಿಯು, ಏಳು ! ವಿಜಯ ನಿನಗಹುದು.
ಬಾಳನಾಳುವ ನೀನು ಬಾಳಿನಾಳಲ್ಲ;
ಕಾಳವಾಳುವ ನೀನು ಕಾಳದಾಳಲ್ಲ.
ನಿನ್ನ ಜಡದೇಹಗಳ ಹಡದಿಯನು ತುಳಿದು
ಇನ್ನು ಸಾಗೆಲೊ ಚಿನ್ನ, ಚಿಂತೆ ಕಳೆದು.

ನಿದ್ದೆಯೊಳಗಿಂದೆದ್ದು ತನ್ನಷ್ಟಕ್ಕೆ ತಾನೆ—

ಕೊಲ್ಲು ಕೊಲ್ಲುವೆನೆಂದು ಕೊಲ್ಲುತಿರುವವನು
ಕೊಲ್ಲುವನೆ ? ಕಾಯುವವ ಯಮನ ಯಮನಿಹನು.
ದೇವನಪ್ಪಣೆಯಿಂದೆ ಇಳೆಯು ತೀಲುವದು
ದೇವನಪ್ಪಣೆಯಿಂದೆ ಮುಗಿಲು ಮೇಲಿಹುದು.
ದೇವನನುಮತಿಯಿಂದೆ ಬೆಂಕಿ ಉರಿಯುವದು
ದೇವನನುಮತಿಯಿಂದೆ ಗಾಳಿ ಹರಿಯುವದು.
ದೇವನಾಜ್ಞೆಯಿದೆಂದು ಬೆಳಕು ಬೆಳಗುವದು
ದೇವನಾಜ್ಞೆಯಿದೆಂದೆ ಮಾತು ಮೊಳಗುವದು.
ಅವನೆ ಶಕ್ತನು ಶಕ್ತಿಯವನೆ ಸತ್ಯ;
ಅವು–ಇವು ನಿಮಿತ್ತಗಳು ಅವನೆ ನಿತ್ಯ !

ಬಂಧನದೊಳಿರುವವರು ಬದ್ಧರಲ್ಲ,
ಬಂಧನಕೆ ಒಳಗಾಗೆ ಬದ್ಧರಿಲ್ಲ!
ಬಂಧನವ ಮೀರಿರುವದೇ ಮುಕ್ತಿ ನಿಜವು,
ಬಂಧನಕೆ ಬೆದರುವದೆ?—ಶಕ್ತಿ ನಿಜವು?
ಬೆದರಿ ಉದುರುವರಾರು ಈ ನಿಮಿತ್ತಕ್ಕೆ
ಇದಿರು ಕಾಂಬುದು ನಿತ್ಯ ನನ್ನ ಚಿತ್ತಕ್ಕೆ.

ಸತೇಜನಾಗಿ—

ಉಘೊ! ಉಘೋ! ಒಳಗಿರುವ ಬೆಳಕೆ ಬೆಳಕೇ!
ಉಘೊ! ಉಘೋ! ಹೊರಗೆ ಹರಿ; ಏಕೆ ಒಳಕೆ?
ದಂಡೆಗುಂಟಿರುವಂಥ ಹಾಳು ಹೊಲದೊಳಗೆ
ಮಂಡಿಸುತ ನೆಲೆಮಾಡು ಭರದ ಬೆಳೆಗೆ.
ಮನದ ಪಂಚಮರೆಲ್ಲ ಮಡಿವಂತರಾಗಿ,
ಜನರ ಜಾತ್ರೆಯೆ ಜಗದ ಸಂಸಾರವಾಗಿ!
ಉಘೊ! ಉಘೋ! ಆನಂದರಸದ ಹೊಳೆಯೇ
ಉಘೊ! ಉಘೋ! ಮಬ್ಬುಗತ್ತಲೆಯಲ್ಲಿ ಹೊಳೆಯೇ.
ಜಡದೇಹದೊಳಗಿರುವ ಜಾಹ್ನವಿಯೆ ಸುರಿಯೇ
ಒಡನೆ ಕಣಕಣವನ್ನು ಉದ್ಧರಿಸಿ ಹರಿಯೇ!
ಕಂಡದ್ದು ಕಣ್ಣೊಳಗೆ ಕೂತು ಕರಗೀತು
ಉಂಡದ್ದು ಮಾತ್ರ ಮೈಯೆಲ್ಲ ಹರಿದೀತು.
ಉಘೊ! ಉಘೋ! ಸೊಬಗು ಸೌಭಾಗ್ಯಕಳೆಯೇ
ಉಘೊ! ಉಘೋ! ಕಪ್ಪು ಕಲೆಯನ್ನು ಕಳೆಯೇ,
ಉಘೊ! ಉಘೋ! ಒಳಗಿರುವ ಬೆಳಕೆ, ಬೆಳಕೇ!
ಉಘೊ! ಉಘೋ! ಹೊರಗೆ ಹರಿ; ಏಕೆ ಒಳಕೆ?

ಅಕಸ್ಮಾತ್ತಾಗಿ ಅನಪೇಕ್ಷಿತವಾಗಿ ಕತ್ತಲಕೋಣೆಯ ಬಾಗಿಲು ತೆರೆದು ಬಿಡುಗಡೆ ಹೊಂದುವನು.

೧೬. ಕೋಗಿಲೆ

(ನಿಜಗುಣ ಶಿವಯೋಗಿಗಳ ಅಜರಾಮರ ಪದದಂತೆ.)

ಕೋಗಿಲೇ, ಚೆಲ್ವಿನ ಕೋಗಿಲೇ
ಮುದ್ದು ಕೋಗಿಲೇ, ಜಾಣ ಕೋಗಿಲೇ || ಪಲ್ಲ ||

ತನುವೆಂಬ ವನದಲ್ಲಿ ಮನದ ಮಾಮರದಲ್ಲಿ
ಕೊನರೆಲೆಯಲಿ ಕುಳಿತು ಕೋಗಿಲೇ !
ದಿನವಿಲ್ಲ ನಿಶೆಯಿಲ್ಲ ದನಿಗೈಯುತಿರುವಿ ನೀ–
ನಾವ ಬಸಂತನ ಕೋಗಿಲೇ ?

ಭಾವನಂದನದಲ್ಲಿ ಯಾವ ಹೂವರಳಲು
ಧಾವತಿಗೊಳ್ಳುತೆ ಕೋಗಿಲೇ !
ಯಾವ ನೂತನ ನನ್ನಿ–ಕಾವನ ಶರಕೆಂದು
ಕೂಗುವಿ ನೀ ಹೇಳು ಕೋಗಿಲೇ !

ಮಾನ್ಯ ವಾಲ್ಮೀಕಿಯಂತೆ ಧನ್ಯಶುಕನೊಲು ಹಾಡು,
ಪಣ್ಯಕಾವ್ಯವು ಹಾಡೆ ? ಕೋಗಿಲೇ !
ಅನ್ಯಮಾತೇ ? ಯಾವ ಪುಣ್ಯಪುರುಷನ ಕಂಡು
ಕೂಹೂಹು ಕುಕಿಲುವಿ ಕೋಗಿಲೇ !

ಮೃಣ್ಮಯ ದೇಹದಿ ಮನ್ಮಯನಾದೆ ನಾ
ಸನ್ಮಯತೆಯ ಕಂಡು ಕೋಗಿಲೇ !
ಚಿನ್ಮಯಾನಂದದಿ ತನ್ಮಯವಾಗಿ ನೀ
ಕೂಹೂಹು ಕುಕಿಲುವಿ ಕೋಗಿಲೇ !

ಕೋಗಿಲೆ

ಹೃದಯ ಕರ್ರನೆ ಕರಗಿ ನದಿಯಾಗಿ ನನ್ನಿಯು
ಉದಯವಾಗುವಂತೆ ಕೋಗಿಲೇ !
ಅದಯರಿದ್ದವರೆಲ್ಲ ಸದಯರಾಗುವಂತೆ
ಕೂಗುವಿಯಾ ಹೇಳು ಕೋಗಿಲೇ !

ವ್ಯೋಮಮಂಡಲ ಸುಖಧಾಮವಾಗುವಂತೆ
ಕಾಮರತಿಯ ಮೀರಿ ಕೋಗಿಲೇ !
ಪ್ರೇಮಕವಿಯು ಕಂಡ ಸಾಮವೇದವ ನೀನು
ಕೂಗುವಿಯಾ ಹೇಳು ಕೋಗಿಲೇ !

ಹರಣದ ಮುಡುಪಿಡುವ ಗರುಡರ ಕರುನಾಡ
ಚರಣ ಚಿಗಿತಿರುವಂತೆ ಕೋಗಿಲೇ !
ಶರಣರ ದಾಸರ ಕರುಣೆ ಕಿರಣಿಸುವಂತೆ
ಕೂಗುವಿಯಾ ಹೇಳು ಕೋಗಿಲೇ !

ಇನ್ನು ನಿದ್ರೆಯ ತೊರೆದು ತನ್ನ ತನವನರಿದು
ಭಿನ್ನ ಭಾವವ ಬಿಟ್ಟು ಕೋಗಿಲೇ !
ನನ್ನ ಕನ್ನಡ ನಾಡ ಚೆನ್ನರೇಳುವಂತೆ
ಕೂಗುವಿಯಾ ಹೇಳು ಕೋಗಿಲೇ !

ಹುಂಬನೀ ಹಾಡು, ಸ್ವ–ಯಂಭು ಸ್ಫೂರ್ತಿಯು ನಿನಗೆ
ಇಂಬುಗೊಟ್ಟಂತಾಡು ಕೋಗಿಲೇ !
ಅಂಬಿಕಾತನಯನ ನಂಬಿಗೆಗಿಂಬಾದ
ನಿಜಗುಣದಲಿ ಬೆರೆತ ಕೋಗಿಲೇ !

೧೭. ಓ ಹಾಡೇ !

(೧)

ಬಗೆಯ ನಗೆಯಲಿ ಸುಳಿವ ಉಗೆವಾಡದಲಿ ಕುಳಿತ
ಜಗವ ಗೆಲ್ಲಲು ನಸುಕಿನಲ್ಲಿ ಅದೆ ದರದಳಿತ–
ಕಮಲ ಕೋರಕದಂತೆ ಬಾಯ್ದೆರೆದ ಚೆನ್ನೆ,
ವಿಮಲ ತಾರಗೆಯಂತೆ ಗೆಯ್ವೆ ಕಣ್ಸನ್ನೆ !
ಬೆಂದು ಬಂದೆನು ಒಂದೆ ವರವ ನೀಡೇ
ಓ ಹಾಡೆ, ಓ ಹಾಡೆ, ಓ ಹಾಡೇ !

(೨)

ತುಸುವು ಕೇಳಲು ಕೂಡ ಸೊಲ್ಲ ಮರೆತಿರಬೇಕು
ರಸವ ಹೀರಲು ಕೂಡ ಎಲ್ಲ ಅರಿತಿರಬೇಕು–
ಇಂಥ ಪದವನು ಹಾಡು ಹಾಡೊಮ್ಮೆ ನಲ್ಲೆ,
ಅಂಥ ತನಿಗುಸುರನ್ನು ನೀನೊರ್ವೆ ಬಲ್ಲೆ !
ಹೇಳು–ಕೇಳುವೆ; ನನ್ನ ಧನ್ಯ ಮಾಡೇ,
ಓ ಹಾಡೆ, ಓ ಹಾಡೆ, ಓ ಹಾಡೇ !

(೩)

ಭೋಗ ಯೋಗದ ಪದವೆ ! ಜೈನವಾಙ್ಮಯ ಮಧುವೆ !
ಯೋಗ ಭೋಗದ ಹದವೆ ! ವಚನಬ್ರಹ್ಮನ ವಧುವೆ !
ಮುದ್ದು ವಿಠಲಗೆ ಮಾರಿಕೊಂಡ ದಾಸಿ !
ಮುದ್ದಣನ ಲಲ್ಲೆವಾತಿನ ಪ್ರೇಮರಾಶೀ !
ಜೀವ ಜೀವಾಳದಲಿ ಬೆರೆತು ಕೂಡೇ
ಓ ಹಾಡೆ, ಓ ಹಾಡೆ, ಓ ಹಾಡೇ !

(೪)

ಮುಂಗೈಯ ಮೇಲೆ ಅಂಗಜನ ಅರಗಿಳಿಯಿರಿಸಿ
ಮುಂಗಾವಲೆಂದು ಸುಗ್ಗಿಯು ಕೋಕಿಲವ ಸರಿಸಿ,
ನೂರು ಕಣ್ಣಿನ ನವಿಲ ಸತ್ತಿಗೆಯು ಮಾಡಿ
ಚಾರುತಮ ಸರಸ ಅರಸಂಚೆಯನು ಹೂಡಿ,
ಬಂದು ನನ್ನಿದಿರಲ್ಲಿ ನಾಟ್ಯವಾಡೇ;
ಓ ಹಾಡೆ, ಓ ಹಾಡೆ, ಓ ಹಾಡೇ !

(೫)

" ಜಡಿಮಳೆಯು ಜಡಿವಂತೆ ಹಾಡಿದರೆ ಹಾಡುವದು
ಇಡಿಯಿಳೆಯು ಹಸುರಾಗಿ ಮಾಡಿದರೆ ಮಾಡುವದು "
ಮಾತು ಮಾತಾಡಪ್ಪ ಮತ್ತೆ ಮಾತಾಡೇ
ಸೋತೆನೊಂದೇ ಮಾತು ಕೇಳಿ, ಮಾತಾಡೇ
ತೆರವುಗೊಡದಿರು ಮೌನ ಬೇಡ ಬೇಡೇ
ಓ ಹಾಡೆ, ಓ ಹಾಡೆ, ಓ ಹಾಡೇ !

(೬)

" ಬಿಡಿಸಿ ಸೆರೆಪಿಡಿದು, ಸೆರೆಗೈದು ಬಿಡುಗಡೆಗೊಳಿಸಿ,
ಕೆಡಿಸಿ ಕಟ್ಟುತ, ಮತ್ತೆ ಕಟ್ಟಿ ಕೆಡಿಸುತಲುಳಿಸಿ,
ಸೂಸಲದ ಬಲವುಳ್ಳ ಮಾತ ಮಾತಾಡು
ಮೀಸಲದ ರಸವುಳ್ಳ ಒಳಹಾಡ ಹಾಡು ! "
ತಡೆಯದಿರು ತಡೆಯದಿರು ಹಾಗೆಯಾಡೇ
ಓ ಹಾಡೆ, ಓ ಹಾಡೆ, ಓ ಹಾಡೇ !

(೭)

“ ಬಿತ್ತಿದರೆ ಬಿತ್ತುವದು ಮುಕ್ತ ಚಿಕ್ಕೆಯ ಕಾಳು
ಮುತ್ತುರತುನವ ಬಿತ್ತಿ ಮಾಡದಿರು ಹೊಲ ಹಾಳು
ಜೀವವನು ಚಾಚಿ ಮುಗಿಲಂಗಳಕೆ ಹಚ್ಚಿ
ದೇವನೊಡೆನುಡಿವಂತೆ ಮಾಡು ಮೆಚ್ಚಿ;
ಏಳು ಮಲಗಿದೆಯೇಕೆ **ಶರಣನಾಡೇ** ”
ಓ ಹಾಡೆ, ಓ ಹಾಡೆ, ಓ ಹಾಡೇ !

(೮)

ಅಳುವ ಕೂಸನು ಲಾಲಿಯೆಂದು ಮಲಗಿಸುವಂತೆ
ಬಳಲಿದಂತಹ ಬಗೆಯ ಸಂತವಿಸಿದೌ ಶಾಂತೆ !
ಮುನ್ನ ಬಗೆಯಲಿ ಹಾಡ ನೀ—ನೀನೆ ಹೆತ್ತಿ
ನನ್ನ ನಾಲಗೆ ನಿನ್ನ ಬರಿ ಸೂಲಗಿತ್ತಿ;
ಇಲ್ಲದಿರೆ ಹಾಡುವದು ನನ್ನ ಪಾಡೇ ?
ಓ ಹಾಡೆ ! ಓ ಹಾಡೆ ! ಓ ಹಾಡೇ !

೧೮. ರಸಿಕಾ ಪೇಳೊ!

ಕಬ್ಬಿನ ಗಣೆ ಡೊಂಕು, ಅದರ ಹಾಲದು ಡೊಂಕೆ
ರಸಿಕಾ ಪೇಳೊ;

. . .

ಹುಬ್ಬಿನ ಗೆರೆ ಡೊಂಕು, ಕಣ್ಣ ನೋಟವು ಡೊಂಕೆ
ರಸಿಕಾ ಪೇಳೊ;

. . .

ಬಿಲ್ಲ ಕಂಬಿಯು ಡೊಂಕು, ಬಿಟ್ಟ ಬಾಣವು ಡೊಂಕೆ
ರಸಿಕಾ ಪೇಳೊ !

. . .

ಹಲ್ಲ ಸಾಲದು ಡೊಂಕು, ಬಿದ್ದ ಕಿರಣವು ಡೊಂಕೆ
ರಸಿಕಾ ಪೇಳೊ !

. . .

ಚೆಂಬಾಳೆ ಮೈ ಡೊಂಕು, ಅದರ ತಿರುಳದು ಡೊಂಕೆ
ರಸಿಕಾ ಪೇಳೊ;

. . .

ಬಿಂಬಾಧರವು ಡೊಂಕು, ಚುಂಬನವದು ಡೊಂಕೆ
ರಸಿಕಾ ಪೇಳೊ !

. . .

ಬಿದಿಗೆ ಚಂದ್ರಮ ದೊಂಕು, ಬೆಳುದಿಂಗಳದು ದೊಂಕೆ
ರಸಿಕಾ ಪೇಳೊ;

. . .

ವಿಧಿಯುತ್ತ ಕುಲ ಡೊಂಕು, ನನ್ನ ಪ್ರೀತಿಯು ಡೊಂಕೆ
ರಸಿಕಾ ಪೇಳೊ !

. . .

೧೯. ಆಮಿಷ

ಅನ್ನವಾಮಿಷವಾಗೆ ಗಂಟಲಿಗೆ ಗಾಳ
ತಿನ್ನುವವನನೆ ತಿನಲು ಯತ್ನಿಸುವ ಕಾಳ.

ಇನ್ನು ಬಾಳುವದೆಂತು ಹೀಗಾಗೆ ಚೆಲುವೇ !
ನಿನ್ನಲ್ಲಿ ಮೀಯುವೀ ಮೀನದಾ ಬಲವೇ !

ಈ ಸೋಗು ನೀ ತೊಟ್ಟ ಹುಟ್ಟ ಪರಿಯುಹುದೊ ?
ಮಾಸಿರುವ ನನ್ನ ಕಣ್ ಬಿಟ್ಟ ಪರೆಯುಹುದೊ ?

ಎತ್ತ ನೋಡಿದೊಡತ್ತಲಾಮಿಷವ ಕಂಡು
ಚಿತ್ತ ವ್ಯಾಕುಲಿಸಿ ಕೇಳುವದು ಭ್ರಮೆಗೊಂಡು:

'ನನ್ನ ನಿನ್ನೀ ನಡುವೆ ಇರುವ ತೆರೆಯೆಂದು
ತನ್ನಿಂದ ತಾನಾಗಿ ಸರಿದೀತು?'–ಎಂದು !

೨೦. ಕನಸಿನೊಳಗೊಂದು ಕಣಸು

ತಾಯಿ ಮಕ್ಕಳ ಸಂವಾದ

(ಈಗಿನ ಕನ್ನಡ ನಾಡಿನ ಮತ್ತು ಕನ್ನಡಿಗರ ಸ್ಥಿತಿಯ ಚಿತ್ರ.)

(೧)

" ಯಾರು ನಿಂದವರಲ್ಲಿ ತಾಯೆ " ಎಂದೆ.
" ಯಾರು ಕೇಳುವರೆನಗೆ, ಯಾಕೆ ತಂದೆ? "

(೨)

" ಬೇಸರದ ದನಿಯೇಕೆ ಹೆಸರ ಹೇಳಲ್ಲ. "
" ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ. "

(೩)

" ನೀನಾರ ಮನೆಯುವಳು ಮುತ್ತೈದೆ ಹೇಳು. "
" ನಾನಾರ ಮನೆಯುವಳೊ ಬಯಲನ್ನೆ ಕೇಳು. "

(೪)

" ಆಪ್ತರಿಲ್ಲವೆ ನಿನಗೆ ಇಷ್ಟರಿಲ್ಲೇ? "
" ಗುಪ್ತರಾದರೊ ಏನೊ ಇಷ್ಟರಲ್ಲೆ ! "

(೫)

" ಇರುವರೇ ಇದ್ದರೇ ಮಕ್ಕಳೆಂಬವರು? "
" ಇರುವರೆಂದರು ಕೂಡ ಯಾರು ನಂಬುವರು? "

(೬)

“ ಮನೆಯಿಲ್ಲವೇ ಇರಲು ಪರದೇಶಿಯೇನು ? ”
“ ಮನೆಯು ಮುನಿದೆದ್ದಿರಲು ಯಾ ದೇಶವೇನು ? ”

(೭)

“ ನಿನ್ನ ಮಾತಿನಲಿಹುದು ಒಡಪಿನಂದ ! ”
“ ನನ್ನ ಹತ್ತಿರದೊಂದೆ ಉಳಿದಿಹುದು ಕಂದ. ”

(೮)

“ ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು ! ”
“ ಸಾಜವಾದರು ಪಕ್ಷವಿದು ವದ್ಯವಹುದು ! ”

(೯)

“ ಯಾವುದಾದರು ನಾಡದೇವಿಯೇ ನೀನು ? ”
“ ಭಾವುಕರ ಕಂಗಳಿಗೆ ದೇವಿಯೇ ನಾನು. ”

(೧೦)

“ ಈಗ ಬಂದಿಹುದೇಕೆ ಏನು ಬೆಸನ ? ”
“ ಯೋಗವಿಲ್ಲದೆ ತಿಳಿಯದೆನ್ನ ವೆಸನ ! ”

(೧೧)

“ ಹಾದಿ ಯಾವುದು ಹೇಳು, ಯಾವ ಯೋಗ ? ”
“ ಆದಿ ಅಂತವು ಇಲ್ಲದಂಥ ತ್ಯಾಗ ! ”

(೧೨)

“ ಬೇಡಬಂದಿಹೆ ಏನು ಏನಾದರೊಂದು? ”
“ ಬೇಡಿದರೆ ಬೇಡಿದುದ ಕೊಡುವೆಯಾ ಇಂದು? ”

(೧೩)

“ ಅಹುದು ಕೊಡುವೆನು ಎಂದು ನಾನೆನ್ನಬಹುದೇ? ”
“ ಬಹುದು–ಗಿಹುದಿನ ಶಂಕೆ ವೀರನಹುದೇ? ”

(೧೪)

“ ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯು. ”
“ ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ. ”

(೧೫)

“ ಇಲ್ಲೆನ್ನಲಾರೆ ನಾನಹುದೆನ್ನಲಮ್ಮೆ. ”
“ ಬಲ್ಲವರು ದೈವವನು ಪರಿಕಿಸುವರೊಮ್ಮೆ! ’

(೧೬)

“ ಚಂಡಿ ಚಾಮುಂಡಿ ಪೇಳ್ ಬೇಕಾದುದೇನು? ”
“ ಗಂಡುಸಾದರೆ ನಿನ್ನ ಬಲಿಕೊಡುವೆಯೇನು? ”

* * *

(೧೭)

ಮನವು ನಡುಗಿತು ತನುವು ನವಿರಿಗೊಳಗಾಯ್ತು;
ನೆನವು ನುಗ್ಗಿತು—ಹೊರಗೆ ಕಂಡೆ—ಬೆಳಗಾಯ್ತು.

೨೧. ದಿನದ ಹಾಡು

(೧)

ದಿನಕೊಮ್ಮೆ ಮೂಡುಂಟು ದಿನಕೊಮ್ಮೆ ಮುಳುಗು,
ದಿನದ ಕತ್ತಲೆಯುಂಟು ದಿನದ ಬೆಳಗು.
ದಿನದ ಬಿನದದ ಪರಿಯು ದಿನಕೊಂದು ಬೇರೆ,
ದಿನದಿನಕೆ ಹಿಗ್ಗುವದು ದಿನದ ಮೇರೆ.
ದಿನದ ಹೂವೇ ಬೇರೆ ದಿನದ ಹಣ್ಣು,
ದಿನಕೊಂದು ವೇಷವೀ ದಿನದ ಹೆಣ್ಣು.
ದಿನದ ಕಾಮನ ಬಿಲ್ಲು ದಿನಕೊಮ್ಮೆ ಮಣಿದು
ದಿನದಿನಕೆ ಜಯಿಸುವದು ಮನವ ಹೆಣೆದು.
ದಿನದೊಡನೆ ಹಳದಾಗಿ ದಿನದ ನೋಟ
ದಿನದೊಡನೆ ಒಸಗುವದು ದಿನದಿನದ ಆಟ.
ದಿನಕಿಂತು ಪಂಥವಿದೆ ದಿನದೊಂದು ಪಾಡು;
ದಿನದಿನಕೆ ಬೇಡವೇ ದಿನಕೊಂದು ಹಾಡು?

(೨)

ದಿನಕೊಂದು ಮನೆಯಲ್ಲಿ ಹೊಸತೊಬ್ಬ ಕಂದ
ದಿನಕೊಬ್ಬ ಹೊಸತಾಯಿ ದಿನಕೊಂದು ಚೆಂದ.
ದಿನದ ಹಾಲಿನ ತೊರೆಯು ದಿನಕೊಮ್ಮೆ ಹರಿದು
ದಿನಕೊಮ್ಮೆ ವಾತ್ಸಲ್ಯ ಮೇರೆವರಿದು
ದಿನಕೊಮ್ಮೆ ಸ್ವರ್‌ಗಂಗೆ ಇಳೆಗೆ ಇಳಿದು
ದಿನಕೊಬ್ಬ ಪಾಪಿಯನು ಹತ್ತಿರೆಳೆದು,
ದಿನದಿನಕೆ ಮುದ್ದಿಟ್ಟು ಹಿಗ್ಗ ಬೀರಿ
ದಿನದ ದುಃಖದ ನಂಜ ತಾನೆ ಹೀರಿ,
ನಿನ್ನೆ ದಿನವಿದ್ದಂತೆ ನಾಳೆ ಇಲ್ಲ
ನನ್ನಿಯೊಂದೇ ಮಾತ್ರ ಅಚಲವಿಹುದಲ್ಲ!

ದಿನದ ಉತ್ಸವ ಬೇರೆ ಪ್ರತಿದಿನವು ಹಬ್ಬ
ದಿನದಿನಕೆ ಹೊಸಲಾಲಿ ದಿನಕೊಂದು ಕಬ್ಬ !

(೩)

ದಿನಕೊಂದು ದಂಪತಿಗೆ ಇನ್ನೊಂದು ಗಂಟು
ದಿನದ ಸಂಸಾರದಲಿ ಬೇರೆ ಸವಿಯುಂಟು.
ಇಂದಿದ್ದ ಸವಿಯೇನು ಮುಂದೆ ಇಲ್ಲ,
ಎಂದಿಗೂ ಸವಿಯೆಂಬುದಮರಪಿಹುದಲ್ಲ!
ಹೊಸ ನಾಣು ಹೊಸ ಮುನಿಸು ಹೊಸದಾಗೆ ಸತಿಯು
ಹೊಸ ಮೌನ ಹೊಸ ಊರ್ಮಿ ಹೊಸದೊಂದು ರತಿಯು.
ಬೇರೆ ಆಟವು ಬೇರೆಬೇರೆ ನೋಟ
ಬೇರೆ ಬೇಟದ ಹಾಗೆ ಬೇರೆ ಕೂಟ.
ದಿನಕೊಂದು ಹೊಸ ಹರೆಯು ದಿನಕೊಂದು ಲಗ್ನ.
ದಿನಕೊಬ್ಬ ನವತರುಣಿ ತರುಣನಲಿ ಮಗ್ನ,
ದಿನಕೊಂದು ಪ್ರಣಯವಿಧಿ ಹೊಸದು ರೀತಿ,
ದಿನದ ಪ್ರೀತಿಯ ಹಾಗೆ ಪ್ರೇಮಗೀತಿ.

(೪)

ದಿನಕೊಬ್ಬ ಸತ್ತರೂ ಅಳುವ ಕರುಳುಂಟು
ದಿನದ ಬಿಸಿಲಿನ ಬಳಿಗೆ ದಿನದ ನೆರಳುಂಟು,
ಕಿಚ್ಚು ಕುಚ್ಚುವ ಕಡೆಗೆ ಹನಿಯೊಡೆವ ಮೋಡ
ನೆಚ್ಚು ಮೆಚ್ಚುಗೆಯೆಂಬ ಭಾವ ನೋಡಾ !
ಮರಳ ತೊಯಿಸುವ ಹೊಳೆಗೆ ಕಾರೆ ಕರೆಯು
ಕರುಳ ಗಂಗೆಗೆ ಮಾತ್ರ ಬೇಸಗೆಯ ನೆರೆಯು.

ದಿನದ ಹಾಡು

ತಲೆತಲೆಗೆ ಹೊಸ ಗುರಿಯು ಹೊಸತು ಆಶೆ,
ತಲೆತಲೆಗೆ ಹೊಸ ದುಃಖ ಹೊಸ ನಿರಾಶೆ.
ಇಂದಿರುವ ಭಯ ಕಳೆಯೆ ಅಭಯ ಕರ ಬೇಡೆ ?
ಹಿಂದಿದ್ದ ಗೀತೆಯೂ ಹಳೆಯ ಹಾಡೇ !
ದಿನದಿನದ ಸಂತಾಪ ವ್ಯಾಪ ಬೇರೆ,
ದಿನದ ನೀಲಾಂಬರಿಯ ಆಲಾಪ ಬೇರೆ !

*　　*　　*

ದಿನದ ಪಂತವು ಬೇರೆ, ಬೇರೆ ಪಾಡು,
ದಿನದ ಹಾದಿಯು ಬೇರೆ, ಬೇರೆ ಹಾಡು !

೨೨. ಸಿಮೋಲ್ಲಂಘನ

ಹೋಗೋಣ ಬಾ ! ಇನ್ನು ಸೀಮೆಯನು ದಾಟಿ !!

ಸಂಗಡವ ಸಂಗಡವ ವಿಂಗಡಿಸಿ ಕೆಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು
ಕಂಗೊಳಿಸೆ ಹಾಗಿರುವ ಬಿರುದನ್ನು ತೊಟ್ಟು
ಹೋಗೋಣ ಬಾ ಇನ್ನು ಸೀಮೆಯನು ದಾಟಿ.

ಇಲ್ಲಸಲ್ಲದ ಕಾಲತೊಡರುಗಳ ಕಡಿದು
ಬಲ್ಲವರು ತೋರಿರುವ ಹಾದಿಯನು ಹಿಡಿದು
ಎಲ್ಲರೂ ಒಂದಾಗಿ ಒಂದಾಗಿ ನಡೆದು
ಹೋಗೋಣ ನಾವೆಲ್ಲ ಸೀಮೆಯನು ದಾಟಿ.

ಅಕ್ಕತಂಗೆಂದಿರಿಗೆ ವಿದ್ಯೆಯನು ಕಲಿಸಿ
ಚಿಕ್ಕಮಕ್ಕಳ ಬುದ್ಧಿ ಮುದ್ದಾಡಿ ಬಲಿಸಿ
ನಕ್ಕು ನಲಿದಾಡಿ ಹಿರಿಕಿರಿಯರನು ಒಲಿಸಿ
ಅಡಿಗಡಿಗೆ ಹೋಗೋಣ ಸೀಮೆಯನು ದಾಟಿ.

ಮಾಡಿದರೆ ನನ್ನಿ ತಾ ಮಾಡುವರು ನನ್ನಿ
ನೋಡಿ ನೋಡಿದವರ್ಗೆ ಬನ್ನಿಬನ್ನೆನ್ನಿ
ಕೊಡಬನ್ನಿ–ಕೊಳಬನ್ನಿ–ಕೊಡುವೆನೀ ಬನ್ನಿ
ಹೀಗೆಂದು ಸಾಗೋಣ ಸೀಮೆಯನು ದಾಟಿ.

ಒಂದಿರುವ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳೆತನದ ಸಿಂಗಾರವಾಯ್ತು

ಸೀಮೋಲ್ಲಂಘನ

ಇಂದು ಮುಟ್ಟಿದ ಪತ್ರಿ ಬಂಗಾರವಾಯ್ತು
ಹೋಗೋಣ ಬಾ ಇನ್ನು ಸೀಮೆಯನು ದಾಟಿ.

ಒಂದೆ ತಾಯಿಯ ಮಕ್ಕಳಂತೆ ಒಂದಾಗಿ
ಅಂದಗೇಡನು ಕೆಡಿಸಿ ಚೆಲುವು ಚೆಂದಾಗಿ
ಮುಂದಿರುವ ಜನರ ಸರಿಮೇಲು ಮುಂದಾಗಿ
ಸಾಗೋಣ ಹೋಗೋಣ ಸೀಮೆಯನು ದಾಟಿ.

ಹೋಗಲಾಡಿಸಿಕೊಂಡು ತಿರುಕತನವನ್ನು
ನೀಗಲಾಡಿಸುತ ಮನೆಮುರುಕುತನವನ್ನು
ಬೇಗದಿಂ ಕರುನಾಡ ಹರಕುತನವನ್ನು
ಕಳೆದು ಹಿರಿದಾಗೋಣ ಸೀಮೆಯನು ದಾಟಿ.

ಪಡುವಣದ ಶಕ್ತಿಯಲಿ ಮೂಡಣದ ಭಕ್ತಿ
ಬಡಗಣದ ಭುಕ್ತಿಯಲಿ ತೆಂಕಣದ ಮುಕ್ತಿ
ಒಡನೊಡನೆ ಸೆರೆಬೆರೆತು ಹೊಸತಾಯ್ತು ಯುಕ್ತಿ
ಹೀಗೆ ಇಡಿಯಾಗೋಣ ಸೀಮೆಯನು ದಾಟಿ.

ದೇವಿಯರ ನಾಡೆಂತು ಹಿಂದುಳಿಯಬಹುದು ?
ಭಾವಭಕ್ತಿಯವೆಂತು ಹಗೆಯಾಗಲಹುದು ?
ಹೇವದಿಂ ಗುರಿಯಿಟ್ಟು ಮೇಳ ಹೊರಟಿಹುದು
ಏರಿಕೆಯ ಕರಿನಾಡ ಸೀಮೆಯನು ದಾಟಿ.

೨೪. ಪಂಪನ ನೆನೆದು

ಕ್ಷಾತ್ರಬಲವು ಮಸಗಿತಿಲ್ಲಿ ಬ್ರಾಹ್ಮತೇಜವೆಸಗಿತು
ಶಾತ್ರವರಿತು ಹಗೆಯ ಮರೆತು ಕೂಡಿ ಮೂಡಿ ಬೆಳಗಿತು
ಚಾಪ–ಶಾಪ–ಸವ್ಯಸಾಚಿ ! ಜಾಡ್ಯವನ್ನು ಅಳಿಸಿದೆ
ಭಾಪು ಕಲಿಯೆ ! ಪೂತು ಕವಿಯೆ ! ಸತ್ತ್ವವನ್ನು ಉಳಿಸಿದೆ.

ಪ್ರೇಯವೊಂದು ಪೀಠವಾಯ್ತು ಶ್ರೇಯವೆಂಬ ಅರಸಿಗೆ
ಶ್ರೇಯವೊಂದು ಛತ್ರದಂತೆ ಪ್ರೇಯವೆಂಬ ಸರಸಿಗೆ
ಪ್ರೇಯವೇನು ಹಗೆಯ ಹಾದಿ ? ಹಗೆಯದೆಲ್ಲಿ ಶ್ರೇಯಕೆ ?
ಹೇಯವಿನಿಸು ಇಲ್ಲ ! ಸಕಲ ಭಾಗ್ಯಭೋಗ್ಯ ಪ್ರೇಯವೇ !

ನಿಂತ ಎಡೆಗೆ ನಿಲ್ಲಳೆಂಬ ಚಂಚಲತ್ವ ದೋಷವು
ಅಂತು ಇಂತು ಅಲ್ಲದಂಥ ವಿದ್ಯೆಯೊಡನೆ ರೋಷವು
ಎಂದು ಪಲಾಯನಾಯ್ತೊ ಏನೊ ! ಯಾರು ಏನನೆಂದರು
ಒಂದುಗೂಡಿ ನಿಧಿಯ ರಾಣಿ ರಸದ ವಾಣಿ ನಿಂದರು.

ಬರೆವ ಕೈಯ್ಯು ಗಂಡುಗೆಡದೆ ಬೀರಕಡಗ ತೊಟ್ಟಿತು
ಹರಿವ ಕಾಲು ಇಲ್ಲಿ ನಿಂತೆ ಅಲ್ಲಿ ಮುಗಿಲ ಮೆಟ್ಟಿತು
ಮೆರೆವ ವಿದ್ಯೆಗಿಲ್ಲಿ ಶ್ರೀಯು ಧಾರೆಯನ್ನು ಎರೆಯಿತು
ಮರೆತು ವೈರವೆಲ್ಲ ಬೆರೆತು ಪಂಪನಲ್ಲಿ ಮೆರೆಯಿತು.

ಚೆನ್ನ ನಡೆಯು; ಚೆನ್ನ ನುಡಿಯು; ಅಂತೆ ಚೆನ್ನ ಕೀರ್ತಿಯು
ಚೆನ್ನ ಹಾವ; ಚೆನ್ನ ಭಾವ; ಅಂತೆ ಚೆನ್ನ ಮೂರ್ತಿಯು
ಚೆನ್ನ ಜಾಣು; ಚೆನ್ನ ಬೀರ; ಚೆನ್ನ ಸಿನ್ನ ಭಕ್ತಿಯು
" ಚೆನ್ನರಿಂದ ಎಲ್ಲ ಚೆನ್ನ " ನನ್ನಿ ! ಚೆನ್ನ ಉಕ್ತಿಯು.

* * *

ಪಂಪನ ನೆನೆದು

ಒಬ್ಬ ಇಬ್ಬರೇನು ತ್ಯಾಗಿ ಭೋಗಿಯಾಗಿ ಹೋದರು ?
ಒಬ್ಬನಿಂದ ಒಬ್ಬ ಮೇಲು ವೀರ ಕವಿಗಳಾದರು !
ಶ್ರೀ–ಸರಸ್ವತೀಯು ದುರ್ಗೆ ವರದ ಹಸ್ತವಿಟ್ಟರೆ ?
ಈ ಸಕಾಲದಲ್ಲಿ ಪಂಪನಂಥ ಜನರು ಹುಟ್ಟರೆ ?

ಮುಗಿಲ ಬಸಿರಿನಲ್ಲಿ ಈಗ ನಿಮ್ಮ ನುಡಿಯು ಅಡಗಿದೆ;
ಭುಗಿಲು ಎಂದು ದಿಗಿಲು ಬಡಿಸಿ ಇಲ್ಲಿ ಏಳತೊಡಗಿದೆ.
ನುಡಿಯು ಗುಡಿಯು ಗರ್ಭದಲ್ಲಿ ತೇಜವೊಂದು ಹೊತ್ತಿತು;
ಬಿಡದೆ ಹರಿಯುದೆದೆಯೊಳಿಂದು ತೇಜವನ್ನೆ ಬಿತ್ತಿತು.

“ ಕಿವಿ ನಿಮಿರ್ಚಿ, ಕಾಲ ಕೆದರಿ, ಪ್ರಾಣ ಹೇಸಕರಿಪುದು
ಬವರವೆಲ್ಲಿ ? ಏಕೆ ತಡವು ? ರಥಿಯುದಾರು ಆರಿಪುದು !
ಬೀರಬೊಬ್ಬೆ, ವಿಜಯಯಾತ್ರೆ ಮತ್ತೆ ಮತ್ತೆ ಗುಡುಗಲಿ
ವೀರಕೇತು ಮಿಳಿರಲಿಂದು ಪಾಪಿಹೃದಯ ನಡುಗಲಿ. ”

ಎಂಬ ಸೊಲ್ಲು ಅಲ್ಲು–ಇಲ್ಲು ಮೊಳೆತು ಮೊಳಗಿ ಬರ್ಪುದು,
ಕಾಂಬ ಕಣ್ಣುಗಳಿಗೆ ವೀರ ರೂಪು ಎಸೆದು ತೋರ್ಪುದು;
ಹರಕೆ ಹೊತ್ತ ದೃಶ್ಯವೊಂದು ಅರಳಿಸಿತ್ತು ಕಂಗಳಂ,
ಇರಲಿ ಜಯಂ ! ಭದ್ರಮಿರಲಿ ! ಇರಲಿ ಶುಭಂ ! ಮಂಗಳಂ !

*　　　*　　　*

ಒದಗಲಿ ಭುವಿಯೊಳ್ದಿವಿಯೊಳ್
ಸದಮಲಕವಿಯೊಳ್ಸುಕೀರ್ತಿದುಂದುಭಿ ನಿನದಂ
ಕದನದೊಳಂ ಸದನದೊಳಂ
ವದನದೊಳಂ ನಿನ್ನ ಕೀರ್ತಿ ಮೆರೆಯಲಿ ಸತತಂ.

೨೪. ಕರಿಮರಿನಾಯಿ

ಕರಿಮರಿನಾಯಿ ಕುಂಯಿಗುಡುತಿತ್ತು
ಭಟ್ಟರ ಬಾಯಿ ಒಟಗುಡುತಿತ್ತು.

ಸರಭರ ಮಳೆಯು ಸುರಿಯುತಲಿತ್ತು
ಕಾಲುವೆ ನೀರದು ಹರಿಯುತಲಿತ್ತು.

ಭೋರೆನೆ ಗಾಳಿಯು ಬೀಸುತಲಿತ್ತು
ತಬ್ಬಲಿ ಕುನ್ನಿಯು ಈಸುತಲಿತ್ತು.

ಜೆಜ್ಜನ ಮನೆಯಾ ಹೊಜ್ಜಲದೊಳಗೆ
ನಿಂತರು ಭಟ್ಟರು ಹಣಕುತ ಹೊರಗೆ.

ಮೆಟ್ಟಲನೇರಲು ಕುನ್ನಿಯು ಅತ್ತ
ಹವಣಿಸೆ, ಬಾಗಿಲು ಮುಚ್ಚಿತು ಇತ್ತ.

ಭಪ್ಪರೆ ಭಪ್ಪರೆ ಭಲರೆ ! ಭಟ್ಟರೋ
ಕಾಯ್ದರು ಮನೆಯನು ಏನು ದಿಟ್ಟರೋ !

ಕುನ್ನಿಯು ಒಳಗೇ ಬಂದೇನೆಂದಿತು;
ಭಟ್ಟರು, ಬಂದರೆ ಕೊಂದೇನೆಂದರು.

೨೫. ಗಿಳಿಯು ಪಂಜರದೊಳಿಲ್ಲಾ*

(ಬೇನೆಯಿಂದ ಬಳಲಿದ ಮಗುವನ್ನು ಮಗ್ಗುಲಲ್ಲಿರಿಸಿ ಒಬ್ಬ ತಾಯಿ ನಿದ್ದೆ ಹೋದಳು. ನಿದ್ದೆ ತಿಳಿದೆದ್ದು ನೋಡುತ್ತಾಳೆ 'ಗಿಳಿಯು ಪಂಜರದೊಳಿಲ್ಲಾ.')

ಏನೆಂದು ಕೂಗಲಿ ನಿನ್ನಾ, ಎನ್ನಾ, ಚಿನ್ನಾ   ॥ ಪಲ್ಲ ॥

ಮಲಗಿಸಿದೆ ಮೊಲೆಯೂಡೀ, ಖೋಡೀ–
ನಿದ್ದೆ ಹೋದೆನದೇಕೊ ಪಾಪಿಯು
ಎದ್ದು ಕಣ್ಣೆರೆವನಿತರೊಳು ನಾ
ಮುದ್ದು ಕಂದಾ! ಮುಚ್ಚಿಬಿಟ್ಟೆಯೊ ಕಣ್ಣಾ—ಏನೆಂದು...

ಮುದ್ದು ಬೀರುವ ಕರುಳೂ, ಬೆರಳೂ,
ಮೀಸಲಳಿಯದ ನಗೆಯು, ಕಪಟವು
ಈಸು ಇಲ್ಲದ ನೋಟ, ಸೊಬಗಿನ
ಕೂಸ ಕಂಡಿದ್ದಿಲ್ಲ ಇಂತಹದನ್ನಾ—ಏನೆಂದು....

ಉರಿಗೆ ಮಿನುಗುವ ಚಿನ್ನಾ, ನನ್ನಾ,
ಹಸುಳನಾ ಸಿಂಗಾರ ಕಳೆ ತಾ–
ನೆಸೆಯುತಿದೆ ಬಂಗಾರವಿದು ತುಸು
ತುಸುವು ಹಾ! ಮಾಸಿಲ್ಲವಿನ್ನೂ ಬಣ್ಣಾ—ಏನೆಂದು....

ಯಾವ ದೃಷ್ಟಿಯ ದೋಷಾ,–ರೋಷಾ,
ಕಣ್ಣು ಕಟ್ಟಿತು ನುಂಗಿ ಜೀವವ,

* ಪುರಂದರದಾಸರ ಒಂದು ಹಾಡಿನ ಪಲ್ಲವಿಯಿದು; ತನ್ನ ಮಗನು ತೀರಿಕೊಂಡಾಗ ಅವರು ಈ ಹಾಡನ್ನು ಅಂದರೆಂದು ಹೇಳುತ್ತಾರೆ.

ಗಿಳಿಯು ಪಂಜರದೊಳಿಲ್ಲಾ

ನುಣ್ಣಗಿರಿಸಿತು ದೇಹವನು ಹಾ !
ಬಣ್ಣಗೆಡಿಸದೆ ತಿರುಳುಗೆಡುವೊಲು ಹಣ್ಣಾ—ಏನೆಂದು....

ಎನ್ನ ಬಸಿರಲಿ ಬೆಳೆದಾ, ಹೊಳೆದಾ,
ಭಾವಕಳೆಯೇ ಬದಿಗೆ ನಿನ್ನನು
ಸಾವು ನುಂಗುತ್ತಿರಲು ಎಂತೀ
ಜೀವ ಸುಮ್ಮನೆ ಬಿದ್ದುಕೊಂಡಿತು ಎನ್ನಾ—ಏನೆಂದು....

ತೋರ ಎದೆಯುದು ತೊರೆದೂ, ಹರಿದೂ,
ತೊಯ್ದಿತೀ ಕುಪ್ಪುಸವು ಸೆರಗೂ
ಐಯ್ದಿತೆಲ್ಲಿಗೊ ಜೀವಹಂಸವು !
ಸುಯ್ಯುಗಿಯ್ದಾ ಬಾಯಿ ತೆರೆಯೋ ಚಿನ್ನಾ—ಏನೆಂದು....

ದೃಷ್ಟಿಗಿಷ್ಟಿಗೆ ಹೆದರೀ, ಬೆದರೀ,
ನಿನ್ನ ನಗೆ ಕಿವಿದಣಿಯೆ ಕೇಳದೆ
ಇನ್ನು ಅತ್ತರೆ ಸಾಕು ಜನುಮವು
ಧನ್ಯವೆಂಬೆನು; ಅಳೆಲೊ ಅಪ್ಪಾ ! ಅಣ್ಣಾ—ಏನೆಂದು....

ಲಲ್ಲೆಯನು ಮರೆಮಾಚೀ, ನಾಚೀ,
ಹಾಡಿ ಮಲಗಿಸಲಿಲ್ಲ ನಿನ್ನನು
ಹಾಡಿ ಅಳುವೆನು ಕೇಳಿ ಏಳೆಲೊ
ಕಾಡು ನನ್ನನು ಬೇಡಿ ಬಡಿಸೋ ಬನ್ನಾ—ಏನೆಂದು....

ಗಿಳಿಯು ಪಂಜರದೊಳಿಲ್ಲಾ

ನನ್ನ ಅನ್ನೃತದ ತುತ್ತೂ, ಬಿತ್ತೂ,
ಎಷ್ಟು ಸಲ ಮುದ್ದಿಟ್ಟರೂ ಅ-
ಷ್ಟಷ್ಟು ಸಲ ಇನ್ನಿಷ್ಟು ಎನಿಸಿತು
ಕಷ್ಟವಯ್ಯೋ ! ಆದೆ ಹುಳುಗಳ ಅನ್ನಾ—ಏನೆಂದು....

ಇದುವೆ ಬಡವಿಯ ಭಾಗ್ಯಾ, ಭೋಗ್ಯಾ,
ಎಂದು ಮನದಲಿ ತಿಳಿದು ನಾ ಬೇ-
ರೊಂದ ಬಯಸದೆ 'ಆಗಲಕ್ಷಯ'
ಎಂದೆ—ನೀನೇ ನನ್ನ ಹೊನ್ನೋ ರನ್ನಾ—ಏನೆಂದು....

ಬಿಸಿಯುಸಿರ ತಳಮಳವೂ, ಝಳವೂ,
ಪ್ರಳಯ ಝಂಝಾನಿಲಕೆ ಸರಿದೊರೆ
ಅಳುವ ಮೊಳಗಿನ ಕೂಡ ಬಿಸಿ-ನೀರ್
ಮಳೆಯು ಸುರಿದರು ತೆರೆಯಲಾರೆಯ ಕಣ್ಣಾ ?—ಏನೆಂದು....

ತೆರವು ನನ್ನೀ ಕೈಯೂ, ಮೈಯೂ,
ತೆರವು ತೊಡೆ, ತುಟಿ ತೆರವು, ನಾಲಗೆ
ತೆರವು, ಕಿವಿ ಕಣ್ ತೆರವು, ಎದೆಯಿದು
ತೆರವು ಬಾಲಾ ! ಮನವೆ ಭಣಭಣ ಶೂನ್ಯಾ—ಏನೆಂದು....

ಬರಿದು ನಿನ್ನೀ ಉಡುಪೂ, ತೊಡುಪೂ,
ಬರಿದು ತೊಟ್ಟಿಲು, ಬರಿದು ಹಾಸಿಗೆ,
ಬರಿದು ಅಂಗಳ, ಬರಿದು ಹಿತ್ತಲು,
ಬರಿದು ಮನೆ, ತಡೆಯುವೆನೆ ರಣರಣವನ್ನಾ—ಏನೆಂದು....

ಗಿಳಿಯು ಪಂಜರದೊಳಿಲ್ಲಾ

ನಿನ್ನ ಪ್ರೀತಿಯ ಎತ್ತು, ಮತ್ತೊ,
ಅತ್ತ ಚೆಂಡಿದು ಇತ್ತ ಬೊಗರಿಯು
ಎತ್ತಿ ಕಣ್ಣನು ನೋಡಲಾರೆನು
ಎತ್ತ ನೋಡಿದರತ್ತ ಆಟದ ಚಿನ್ಹಾ—ಏನೆಂದು....

ಇದ್ದ ಕಣ್ಣನು ಕಳೆದೂ, ಸೆಳೆದು,
ಕೈಯ ಕೋಲನು ಕೊಯ್ದು ಕಾಲನು
ಮೆಯ್ಯಗೆಡಿಸಿದ ಮೇಲೆ ಬದುಕೇ !
ಅಯ್ಯೊ ದೈವವೆ ! ಏನು ಮಾಡಲಿ ಮುನ್ನಾ—ಏನೆಂದು....

ಮಿಗುವ ತಾಪಕೆ ಕಾಯ್ದೂ, ಕಾಯ್ದೂ,
ಕರಗಿ ಬಾಯಲಿ ಬಾಯನಿಕ್ಕುತ
ಸುರಿದರೆನ್ನೀ ಪ್ರಾಣ, ಕಂದಾ !
ತಿರುಗಿ ಬಂದೀತೇನೊ ಜೀವವು ನಿನ್ನಾ—ಏನೆಂದು....

ಕಲ್ಪವೃಕ್ಷದ ಅಗಿಯೇ, ಚಿಗಿಯೇ,
ದೊರೆಯುದೀ ಚಂಡಾಳಿಯಾ ಹೊಲೆ–
ನೆರಳಿನಲಿ ಇಂಬೆಂದು ಕವುರುತ
ಮುರಳಿ ತೆರಳಿದೆ ಸ್ವರ್ಗಧಾಮಕೆ ನಿನ್ನಾ—ಏನೆಂದು....

ಕ್ಷೀಣವಾಯಿತು ಪುಣ್ಯಾ, ನನ್ನಾ,
ಕಂದ ತೀರಿದೆ, ಈಗ ಸೇರಿದೆ
ನಂದನವ, ಹಾ ! ಮತ್ತೆ ಎನ್ನುವೆ
ಎಂದು ಪಡೆಯುವೆ ಕಂದನನು ನಿನ್ನನ್ನಾ—ಏನೆಂದು....

ಗಿಳಿಯು ಪಂಜರದೊಳಿಲ್ಲಾ

ಕರುಳಮಲ್ಲಿಗೆ ಹಬ್ಬೀ, ಕೊಬ್ಬೀ,
ಚೆಂದ ನನೆಕೊನೆಯೇರುತಿರೆ ನಲ–
ವಿಂದ ಕಳವಿಲಿ ಬಂದು ನೆರವಿನ
ಹಂದರವ ಕೆಡಿಸುವದಿದೇನಿದು ಚೆನ್ನಾ—ಏನೆಂದು....

ಎದೆಯ ತಿರುಮಲೆಯಿಂದಾ, ಬಂದಾ,
ಹಾಲಗಂಗೆಗೆ ಕಣ್ಣನೀರಿನ
ಕಾಲ್ವೆ ಕೂಡಿತು. ಕ್ಷೀರಸಾಗರ–
ಲೀಲೆ ತಿಳಿವುದೆ ! ತಾನೆ ಬಲ್ಲನು ತನ್ನಾ–ಏನೆಂದು....

ತನ್ನ ಕೂಸದು ಅಚ್ಚ್ಯಾ, ಮೆಚ್ಚ್ಯಾ,
ತಾಯಿ ತಾಯಿಗೆ—ಇದ್ದು ಎಲ್ಲರ
ತಾಯಿತಂದೇ ಚಿಗುರ ಚಿವುಟುವೆ;
ಮಾಯೆ ಮಮತೆಯು ನಿನ್ನ ರೀತಿಯೆ ಭಿನ್ನಾ—ಏನೆಂದು....

ಕರುಳ ಕಳವಿದು ಸರಿಯೇ, ಹರಿಯೇ,
ದಾನ ದೊರೆಯದು ಎಂದು ವಂಚಿಸಿ
ದೀನ ಮಾತೆಯ—ನಿನ್ನ ನಾಟಕ
ನೀನ ಬಲ್ಲೆಯೊ ಘನಕರುಣಸಂಪನ್ನಾ—ಏನೆಂದು....

೨೬. ೩೩೦೦೦೦೦೦೦

(ಕಡೆಯಿಲ್ಲದ ಕಡಲ ನಡುವೆ ಸ್ಥಿರಾಸನದಲ್ಲಿ ಭೂಮಿತಾಯಿಯು ಧ್ಯಾನ ಮುದ್ರೆಯಲ್ಲಿ ಕುಳಿತಿದ್ದಾಳೆ. ಅವಳ ಎಡತೊಡೆಯ ಮೇಲೆ ಭಾರತಿಯು ತನ್ನ ಮೊಗವನ್ನು ಬಲಗೈಯಿಂದ ಒರಗಿಸಿ ಎಡಗೈಯನ್ನೆತ್ತಿ ಹಾಡಿಹಾಡಿ ತನ್ನ ಪಾಡನ್ನು ತೋಡಿಕೊಳ್ಳುತ್ತಲಿದ್ದಾಳೆ. ಅವಳ ಸುತ್ತಲೂ ವಿವಿಧಾಕಾರದ ಕೋಟ್ಯಾವಧಿ ಪ್ರಾಣಿಗಳು ಅಸ್ತವ್ಯಸ್ತವಾಗಿ ಬಿದ್ದುಕೊಂಡಿವೆ.)

ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ
ಮೂವತ್ತುಮೂರು ಕೋಟಿ? ॥ ಪಲ್ಲ ॥

ಮೂವತ್ತುಮೂರು ಕೋಟೀ, ಮೂವತ್ತುಮೂರು ಕೋಟೀ !
ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ?
ಮೂವತ್ತುಮೂರು ಕೋಟಿ !
ನಾ ಹಡೆದ
ಮೂವತ್ತುಮೂರು ಕೋಟಿ ॥ ಅನುಪಲ್ಲ ॥

(೧)

ಮೂವತ್ತುಮೂರು ಕೋಟೀ, ಮೂವತ್ತುಮೂರು ಕೋಟೀ !
ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು
ಮೂವತ್ತುಮೂರು ಕೋಟಿ !
ಸೂಲಗಳು
ಮೂವತ್ತುಮೂರು ಕೋಟಿ !!

(೨)

ಹಲಕೆಲವು ಹುಳುಗಳೆನ್ನಿ ! ಹಲಕೆಲವು ಕುರುಡು ಕುನ್ನಿ !
ಕೆಲಕೆಲವು ಹುಚ್ಚುಕುರಿ ! ಕೆಲವು ಹೊಸಹೊಚ್ಚ ಮರಿ !

ಗಂಡುತನಕೇಸೊ ಸೊನ್ನಿ !
　　ಲೆಕ್ಕಕ್ಕೆ
ಮೂವತ್ತುಮೂರು ಕೋಟಿ !!

(೩)

ಅತ್ತೊಂದು ಹತ್ತು ಕೋಟಿ ! ಇತ್ತೊಂದು ಹತ್ತು ಕೋಟಿ !
ಸೋದರರು ಇದ್ದರೂ ಆದರದ ನುಡಿ ಇಲ್ಲ;
　　ಅತ್ತಿತ್ತ ಹತ್ತು ಕೋಟೀ !
　　　　ಹೆಸರಿಗೇ
　　ಮೂವತ್ತುಮೂರು ಕೋಟಿ !!

(೪)

ಬೀತ ನರಪೇತುಗಳಿರಾ ! ಬಾತಂಥ ಪ್ರೇತಗಳಿರಾ !
ಮಣ್ಣನ್ನು ಮುಕ್ಕುವಿರಿ, ಮಸಣದಲಿ ಬಿಕ್ಕುವಿರಿ !
　　ಹಾರಿರೋ ಜೊಳ್ಳುಗಳಿರಾ !
　　　　ಉಸಿರಿಡುವೆ,
　　ಮೂವತ್ತುಮೂರು ಕೋಟಿ !

(೫)

ಸುಣ್ಣವನು ಸುರಿದ ಮೇಲೆ ಕಣ್ಣೀರನೆರೆಯೆ ಹಾಲೇ?
ಬಣ್ಣ ಬಣ್ಣದ ಜೀವ ಕತಕತನೆ ಕುದಿಯುವವು
　　ಮನೆಯಾಯ್ತು ಮಲ್ಲಸಾಲೆ;
　　　　ಇದು ಬದುಕೆ ?
　　ಮೂವತ್ತುಮೂರು ಕೋಟಿ !!

(೬)

ಹಂಗಿನರಮನೆಯು ನರಕಾ–ತಂಗುವಿರಿ–ಇಹುದೆ ಮರುಕಾ ?
ಹಿಡಿಬೆರಳ ಹಿಡಿಯಲ್ಲಿ ಅಡಿಯೊರಡರಡಿಯಲ್ಲಿ
ಹೊರಳಿ ಒರಲುವಿರಿ ಅಕಟಾ !
ಅಕಟಕಟ !
ಮೂವತ್ತುಮೂರು ಕೋಟಿ !!

(೭)

ಹಾಳರ್ಥ ಹೊಲೆಯರೆಂದೂ ಬೀಳರ್ಥ ಹೆಣ್ಣು ಎಂದೂ
ಹೋಳು ಹೋಳಾಗಿಹುದು; ಆಳು ಬಾಳಾಗಿಹುದು
ಏಳಿರೋ ಆಳಿರೆಂಬೀ–
ಬಾಳಿರೋ
ಮೂವತ್ತುಮೂರು ಕೋಟಿ !!

(೮)

ಹಡೆದೊಡಲು ಬಂಜೆಯಾಯ್ತೆ ? ಬಾಳ್ಮೊದಲೆ ಸಂಜೆಯಾಯ್ತೆ ?
ಭಾರತಿಗೆ ತಲೆಭಾರ ಇರುವಳೆಂಬ ವಿಚಾರ–
ಬಾಳ್ವಣ್ಣು ಗಂಜು ಆಯ್ತೆ ?
ಬರಿ ಶೂನ್ಯ
ಮೂವತ್ತುಮೂರು ಕೋಟಿ !!

(೯)

ನನ್ನೆದೆಯ ಹಾಳನೆರಸೀ ನನ್ನೊಳಹ ಬೆಳಕ ಬೆರಸೀ,
ವಜ್ರದೇಹಿಗಳೆಂದೆ ಗೊನೆವಿಂಚೊ ಎನೆ ಕಂಡೆ–

ವಿಜಯವಿರಲೆಂದು ಹರಸೀ
ಕಳುಹಿದೆನು
ಮೂವತ್ತುಮೂರು ಕೋಟಿ !!

(೧೦)

ಬಸುರಿನಲಿ ಪಡೆದುದೇನು ? ಹೊರಗಿಲ್ಲಿ ಹಡೆದುದೇನು ?
ಅರರೆ! ಬಡ ಒಡಲುಗಳು ಸೆರೆಮನೆಗಳಾದವ್ರೋ !
ನನ್ನಳಲು ಕೇಳದೇನೋ
ಎಲೆಲೇ
ಮೂವತ್ತುಮೂರು ಕೋಟಿ !!

(೧೧)

ಡಿಂಭಗಳನೊಡೆದು ಬನ್ನಿ ! ಕಂಭಗಳನೊಡೆದು ಬನ್ನೀ !
ಮೈಯಲ್ಲಿ ಮುಡಗದಿರಿ ! ಮನದಲ್ಲಿ ಅಡಗದಿರಿ !
ತಾಯಿ ಇದೋ ಬಂದೆವೆನ್ನೀ !
ನಾ ಪಡೆದ
ಮೂವತ್ತುಮೂರು ಕೋಟಿ !!

೧೭. ನನ್ನ ಕಂದ

ಮೊದ್ದು ಮೊಗದಲೆಲ್ಲ ಮುದ್ದೆ ಮುದ್ದೆ ಮಾಡಿ ಇಟ್ಟಿದೆ.
ಹಾಸಿ ಕಣ್ಣನಂಜಿಗೊಂದು ಮುದ್ದು ಕಪ್ಪುಬೊಟ್ಟನೆ
ಕಪ್ಪು ಕುರುಳು ಒಪ್ಪವಿಡಿದು ದಟ್ಟವಾಗಿ ಬಳೆದಿವೆ–
ಚಿನ್ನ ನಿನ್ನ ಭಾಗ್ಯದೆಸೆಗೆ ಬರುವ ಹಣೆಯು ಬಳೆಯಲಿ.

ಕೆನ್ನೆ ಕೆನ್ನೆಗಳಲಿ ಅರುಣ ಕಿರಣ–ರಾಗ ಮೂಡಿದೆ,
ಹವಳ–ತುಟಿಗಳೆಡೆಯೊಳೊಂದು ಪಾರಿಜಾತ ಹೂತಿದೆ.
ಚಿಕ್ಕ ಹಾಸೆಗಳಲಿ ಚುಕ್ಕಿಯಂತೆ ಮಿಣುಕು ಮಿಣುಕುವಾ
ಬೆಳಕು ಮಿಂಚು ಹೊಂಚು ಹಾಕಿಕೊಂಡ ತೆರದಲಿರುವದು.

ಸುದ್ದ ಬಿದಿಗೆಯಂದಿನಿಂದ ಮುಂದೆ ಚಂದುಮಾಮನಾ
ಚೆಂದದಂದದಂದ ಕಂಡೆ ಮೊಗದಲಿಂದು ಕಂದನಾ;
ಚಂದುಮಾಮನಂದಗೆಡಿಪ ಕಂದು ಕುಂದು ಇಲ್ಲವು
ನಿನ್ನ ಚೆನ್ನರೂಪು ಚೆನ್ನ ಇನ್ನು–ಮುನ್ನು ಎಂದಿಗೂ.

ದಟ್ಟ ಅಡಿಯು ಪುಟ್ಟ ಕಾಲು ಮೇಲೆ ಬಟ್ಟ ತೊಡೆಗಳು
ದಿಟ್ಟತನದ ಪಟ್ಟವಣೆಯು ಮಟ್ಟಸಾದ ಎದೆಯಿದು,
ಮುಚ್ಚಿಕೊಂಡ ಮೆಚ್ಚುಬೆರಳು ಈಟು ಈಟು ಕೈಗಳು
ಮಾಟಿ ಮಾಟ ಮಮತೆಯಾಟದೊಂದು ಗೊಂಬೆಯಿಂದೆನು.

ಪರಸು ಮಣಿಯು ಬೆರಗುಗತೆಯು ಬರಿಯ ಸರಸವೆನಿಸಿತು,
ಅಮರ ವರದ ಕರದ ಪ್ರೇಮ–ಸ್ಪರ್ಶದಿಂದ ಇಂದಿಗೆ
ನನ್ನ ಕಣ್ಣಮುಂದೆ ನನ್ನ ಮಣ್ಣೆ ಹೊನ್ನು ಆಯಿತು–
ನನ್ನ ಚಿನ್ನ ನಿನ್ನ ಒರೆಯು ಚಿನ್ನ ದೊರೆಯದೆಂದಿಗೂ.

ನನ್ನ ಕಂದ

ಮಿರುಗು ಮೈಯ ಮುಸುಗಲೊಂದು ಹರಕು ಬಟ್ಟೆ ಇಲ್ಲದೆ
ತಿರುಕನಂತೆ ಮರುಗು ಮರುಕ ಹುಟ್ಟಿಸುತ್ತ ಇಲ್ಲಿಗೆ
ಯಾವ ಜನುಮದೊಂದು ಗುರುತ ಸೆಸೆದು ಏನು ಕಾರಣ
ಮುದ್ದು ಕಂದ, ಎತ್ತಣಿಂದ ಎಂತು ಇಂತು ಬಂದೆಯೊ ?

ಕಂದ, ನಮ್ಮ ಮನೆಯ ನಂದದೊಂದು ದೀಪವಾಗಿ ನೀ
ಬೆಳಗು, ಬಾಳು, ಬದುಕನಾಳು, ಬಳ್ಳಿವಳ್ಳಿ ಹಬ್ಬಲಿ
ನನ್ನ ಹಾಲು ನಿನ್ನೊಳೊಂದು ಗಂಗೆಯಾಗಿ ಹರಿಯಲಿ
ಎಂದು ನನ್ನ ಹಸುಳ ನಿನ್ನ ಹರುಷದಿಂದ ಹರಸುವೆ.

೨೮. ಹಕ್ಕಿ ಹಾರುತಿದೆ ನೋಡಿದಿರಾ ?

ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತುಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ ?

ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿ–ಹೊಳೆ ಬಣ್ಣದ ಗರಿ–ಗರಿಯುಂಟು
ಕೆನ್ನನ ಹೊನ್ನನ ಬಣ್ಣ-ಬಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿ ಹಾರುತಿದೆ ನೋಡಿದಿರಾ ?

ನೀಲಮೇಘಮಂಡಲ–ಸಮ ಬಣ್ಣ !
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ !
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ ?

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ ?

ಹಕ್ಕಿ ಹಾರುತಿದೆ ನೋಡಿದಿರಾ ?

ಯುಗ–ಯುಗಗಳ ಹಣೆಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ ?

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ ?

ಮುಟ್ಟಿದೆ ದಿಗ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ
ಬ್ರಹ್ಮಾಂಡಗಳನು ಒಡೆಯಲು ಎಂದೊ
ಬಲ್ಲರು ಯಾರಾ ಹಾಕಿದ ಹೊಂಚ
ಹಕ್ಕಿ ಹಾರುತಿದೆ ನೋಡಿದಿರಾ ?

೨೯. ತುತ್ತಿನ ಚೀಲ

೧

ಅನ್ನಬ್ರಹ್ಮದ
ದೇಗುಲದಲ್ಲಿ
ಬೆಳಗೂ ಬೈಗೂ
ಛಿಳಿ ಛಿಟ ಬೆಂಕಿ
ಡೊಂಬರ ಪೂಜೆಯು,
ಕಾಗೆಯ ಮಂತ್ರ,
ಗಾಳಿಯ ಎಡೆಯು,
ಬೊಬ್ಬೆಯ ಗಂಟೆ—
ಅನ್ನಬ್ರಹ್ಮದ
ದೇಗುಲದಲ್ಲಿ !

೨

ನಾದಬ್ರಹ್ಮದ
ಕಗ್ಗವಿಯಲ್ಲಿ
ಮೌನದ ವೀಣೆಗೆ
ಕರುಳಿನ ತಂತಿ,
ಮಿಡಿದೂ ಮಿಡಿದೂ
ಮುರಿದವು ಬೆರಳು.
ಮಿಡುಕೀ ಮಿಡುಕೀ
ನೊಂದಿತು ಎದೆಯು—
ನಾದಬ್ರಹ್ಮದ
ಕಗ್ಗವಿಯಲ್ಲಿ !

ತುತ್ತಿನ ಚೀಲ

೩

ಶಬ್ದಬ್ರಹ್ಮದ
ಗುಮ್ಮಟದಲ್ಲಿ
ಹಗಲೂ ಇರುಳೂ
ವೇದದ ವಾದ,
ಪಾಪಪುಣ್ಯಗಳ
ಜಾಳಿಗೆಯಲ್ಲಿ
ನೇತಿದೆ ಜೋತಿದೆ
ಜೀವದ ಜೇಡ—
ಶಬ್ದಬ್ರಹ್ಮದ
ಗುಮ್ಮಟದಲ್ಲಿ !

೪

ದೈವುಳ್ಳವರಿಗೆ
ದಯವೇ ಇಲ್ಲ !
ತಿತ್ತಿರಿ ತುಂಬಿದೆ
ಕೂಳಿನ ಕೋಟಿ !
ಬಿಡುಗಣ್ಣವರಿಗೆ
ಕಾಣುವದಿಲ್ಲ
ಅಮೃತದ ತೇಗಿನ
ಮದವಂತಹದು !
ಹಸಿದವ ಬಲ್ಲ
ಹಸಿವೆಯ ಶೂಲಿ !

೫

ಶಿವಾ ಶಿವಾ ಹೇ
ಶಿವ ಮಾದೇವಾ !
ಅತ್ತಿತು ಕೂಗಿತು
ಚೀರಿತು ಜೀವ
ಬಾಯುಂಗಳದಲಿ
ಹುಟ್ಟಿದ ಮಾತು
ಮುಗಿಲಿನ ಕಿವಿಯನು
ಮುಟ್ಟಲೆ ಇಲ್ಲ;
ಹಾಡುವ ಸಭೆಯಲಿ
ನರಳುವದುಂಟೆ ?

೬

ಕಿಕ್ಕಿರಿ ತುಂಬಿದೆ
ಭೂಮಿಯ ಕಣಜ
ಕಕ್ಕಸಬಡುತಿದೆ
ಬೊಕ್ಕಸದೊಡಲು
ಬಾಳಿಗಿಂತಲೂ
ಕೂಳೇ ಮೇಲೊ ?
ಬರಿದೋ ಬರಿದು
ತೆರವೋ ತೆರವೂ
ಬಡವರ ಬಗ್ಗರ
ತುತ್ತಿನ ಚೀಲಾ.

ತುತ್ತಿನ ಚೀಲ

೭

ದೇವರದೊಂದು
ಗೋರಿಯ ಕಟ್ಟಿ,
ಧರ್ಮದ ಧೂಪಕೆ
ಬೆಂಕಿಯನಿಕ್ಕಿ,
ಗಣಗಣ ಬಾರಿಸಿ
ಪ್ರಾಣದ ಗಂಟೆಯ,
ಸಾವಿನ ನೋವಿಗೆ
ಕಲಮಲವೆದ್ದು
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು–
ಗರ್ಜಿಸುತಿಹುದು–
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು !

೩೦. ನಗೀನವಿಲು

ನಾರೀ ನಿನ್ನ ಮಾರೀಮ್ಯಾಗ
ನಗೀನವಿಲು ಆಡತಿತ್ತ
ಆಡತಿತ್ತ ಓಡತಿತ್ತ
ಮುಗಿಲ ಕಡೆಗೆ ನೋಡತಿತ್ತ.

ಮಿನ ಮಿನ ಮಿನ ಮಿಂಚತಿತ್ತ
ಮೂಡತಿತ್ತ ಮುಳುಗತಿತ್ತ
ಮುಳುಗತಿತ್ತ ತೊಳಗತಿತ್ತ
ನೆಲಾ ಜಲಾ ಬೆಳಗತಿತ್ತ.

ಕಣ್ಣಿನ್ಯಾಗ ಬಣ್ಣದ ನೋಟ
ತಕತಕ ಕುಣಿದಾಡತಿತ್ತ
ಕುಣೀತಿತ್ತ ಮಣೀತಿತ್ತ
ಒನಪಿಲೆ ಒನದಾಡತಿತ್ತ.

ಮನದ ಮಾಮರದ ಕೊನಿಗೆ
ಕೋಕಿಲೊಂದು ಕೂಡತಿತ್ತ
ಕೂಡತಿತ್ತ ಹಾಡ ಬಿಟ್ಟು
ಬರೇ ನಿನ್ನ ನೋಡತಿತ್ತ.

ಒಂದು ಜೀವಾ ನೊಂದುಕೊಂಡು
ಹಗಲಿರುಳು ಮಿಡುಕಾಡತಿತ್ತ
ಮಿಡುಕತಿತ್ತ ತೊಡಕತಿತ್ತ
ಏನೋ ಒಂದ ಹುಡುಕತಿತ್ತ.

ಕಣ್ಣೀರಿನ ಮಳೆಯುಃಕೂಡ
ತನ್ನ ದುಃಖ ತೋಡತಿತ್ತ
ತೋಡತಿತ್ತ ಬೇಡತಿತ್ತಃ
ದೊರಕದಕ್ಕ ಬಾಡತಿತ್ತ.

೩೧. ರಾಗರತಿ

ಮುಗಿಲ ಮಾರಿಗೆಽ ರಾಗರತಿಯ ಸಂಜ ಏರಿತ್ತಽ
—ಆಗ–ಸಂಜೆಯಾಗಿತ್ತ;
ನೆಲದ ಅಂಚಿಗೆ ಮಂಜಿನ ಮುಸುಕು ಹ್ಯಾಂಗೋ ಬಿದ್ದಿತ್ತಽ
ಗಾಳಿಗೆ ಮೇಲಕ್ಕೆದ್ದಿತ್ತಽ.

ಬಿದಿಗಿ ಚಂದ್ರನಾ ಜೋಗಚೀ–ನಗಿ–ಹೂ ಮೆಲ್ಲಗ ಮೂಡಿತ್ತಽ
ಮ್ಯಾಲಕ ಬೆಳ್ಳಿನ ಕೂಡಿತ್ತ;
ಇರುಳ ಹೆರಳಿನಾ ಅರಳಮಲ್ಲಿಗೀ ಜಾಳಿಗಿ ಹಾಂಗಿತ್ತ
ಸೂಸ್ಯಾವ ಚಿಕ್ಕಿ ಅತ್ತಿತ್ತ.

ಜೋಗಸಿಗಣ್ಣಿನಾ ಬಯಕೆಯ ಹೆಣ್ಣು ನೀರಿಗೆ ಹೋಗಿತ್ತಽ
ತಿರುಗಿ ಮನೀಗೆ ಸಾಗಿತ್ತ;
ಕಾಮಿ ಬೆಕ್ಕಿನ್ಹಾಂಗ ಭಾಂವೀ ಹಾದಿ ಕಾಲಾಗ ಸುಳಿತಿತ್ತಽ
ಎರಗಿ ಹಿಂದಕ್ಸರಳಿತಿತ್ತ.

ಮಳ್ಳಗಾಳಿ–ಸುಳಿ ಕಳ್ಳ ಕೈಲೆ ಸೆರಗನು ಹಿಡಿದಿತ್ತಽ
ಮತಮತ ಬೆರಗಿಲೆ ಬಿಡತಿತ್ತ;
ಒಂದ ಮನದ ಗಿಣಿ ಹಿಂದ ನೆಳ್ಳಿಗೆ ಬೆನ್ನಿಲೆ ಬರತಿತ್ತಽ
ತನ್ನ ಮೈಮರ ಮರೆತಿತ್ತ.

೩೨. ನರಬಲಿ

೧

ಬಲಗಾಲಲಿ ಬಿಡುಗಡೆಯನು ಮೆಟ್ಟಿ—ನಿಂತಿಹೆ ಎಲೆ ಕಾಳಿ !
ನಿನ್ನೆಡಗಾಲನು ನೆಕ್ಕುತಲಿಹುದು—ಶ್ವಾನಸೂಕರಾಳಿ !
ಭಯದಾಯಕ ಬಲಗೈಯನು ಚಾಚಿಹೆ !
ಶಾಪವ ಕೊಡಲೆಡಗೈಯನು ಎತ್ತಿಹೆ ಎಲೆಲೆ ರುದ್ರಕಾಳಿ !
ಮುಂದೆ ಬೀಸಿ ದುಃಶಾಸನ ಪಾಶವ
ಹಿಂದಿರಿಸಿಹೆ ದುರ್ಯೋಧನಾಂಕುಶವ ಅಹಹ ಮಹಾಕಾಳಿ !
ಮುಸುಕಿತು ಮುಸುಕಿತು ಮುಸುಕಿತು ನೋಡೇ
ನಿನ್ನ ಹೊಟ್ಟೆಯುರಿಯಿಂದಲೆದ್ದ ಹೊಗೆಯಿಂದ ನಿನ್ನ ಮೈಯು !
ಎಸೆವುದು ಎಸೆವುದು ಎಸೆವುದು ನೋಡೇ
ದಿಗಿಲುಗೊಳಿಸಿ ಭುಗಿಲೆಂದು ಎದ್ದಮೊಗದಲ್ಲಿ ಬಿಸಿಲ ಜೇಗೆ !
ಎದ್ದೆ ಎದ್ದೆ ನೀನೆದ್ದೆ !
ಜೀವ ತಿನ್ನುವಾ ಹಸಿವೆ ಮತ್ತೆ ಆ ನೆತ್ತರನೀರಡಿಕೆ
ಮೈಯ ತಾಳಿ ನೆಲದೆದೆಯ ಸೀಳಿ
ಎದ್ದಂತೆ ಪ್ರಳಯಕಾಳಿ !
ನಾಳಿನ ಬಲಿಗಳ ಗೋಳನು ಊಹಿಸೆ
ನಿನ್ನ ನಿನ್ನ ಆ ಉದ್ದ ಕಿವಿಗಳೂ ತಾವೇ ಬತ್ತಿದವು !
ಮುಂದಿನ ಸಾವಿನ ಗೊಂದಲ ಕಲ್ಪಿಸಿ
ನಿನ್ನ ನಿನ್ನ ಆ ಬಿರಿಗಣ್ಣುಗಳನು ನೀನೆ ಕಿತ್ತುಕೊಂಡೆ !
ಆರುವೆ ಎಂದು ? ಎಂದು ಆರುವೆ ?
ನೆಲಪಗಲಕೆ ಮುಗಿಲುದ್ದಕೆ ಹೊತ್ತಿಹ ಎಲೆಲೆ ಬಂಜೆ ಬೆಂಕಿ !
ಪ್ರಳಯಕಾಳಿ ಏ ರುದ್ರಕಾಳಿ ಎಲೆ ಎಲೆಲೆ ಹುಹಾಂಕಾಳಿ !

ನರಬಲಿ

೧

ನಿಂದಿಹರಿದೋ ಇಗೋ !
ಎಕ್ಕಡ ಮೆಟ್ಟಿಹ ಎಕ್ಕಲ ಬಂಟರು
ಉಕ್ಕಡ ಗಾತ್ರದ ಉಕ್ಕಡದವರು
ಕಕ್ಕಡ ಹೊತ್ತಿಸಿ ಕಣ್ಣುಗಳಲ್ಲಿ
ಮಾಡಿಸೆ ಕೆನ್ನೀರ್ ಜಳಕವನು
ಏರಿಸೆ ರುಂಡದ ಹೂವುಗಳ
ಹಾಕಲು ಮದ್ದಿನ ಧೂಪವನು
ಬಾರಿಸೆ ಗುಂಡಿನ ಗಂಟೆಗಳ
ಬಂದಿತು ಬಂದಿತು ನೈವೇದ್ಯ
ನೀತಿಯ ಭೂತವೆ ಹೊರಡಿಲ್ಲಿಂದ
ದಯಿಯು ದೆವ್ವವೇ ನೀ ಹೊರಡು
ಕರುಳಿನ ಮರುಳೇ ಓಡಿಲ್ಲಿಂದ
ನ್ಯಾಯರಾಕ್ಷಸನೆ ನೀನೋಡು
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು !
ಇದುವೇ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ !

೨

ಮುಪ್ಪಿನ ತಾಯ್ಗಳೆ, ಹೊಟ್ಟೆಯ ಹೋಳ್ಕ
ಮುದಿ ತಂದೆಗಳೇ, ಕೈ ಕೈ ತಾಳ
ಬಡೆಯಿರಿ ಬಾರಿಸಿರಿ !
ಚಿಕ್ಕ ಮಕ್ಕಳೇ, ಚೀರು ಸನಾದಿಯ

ನರಬಲಿ

ಅಕ್ಕತಂಗಿಯರೆ, ಅಳಲಿನ ಕೊಳಲ
ಊದಿರಿ ಉಸಿರಿಸಿರಿ !
ಮುಂಡೆ ಮೋಚಿದಾ ಹೆಂಡಿರ ದಂಡೇ
ವಿವಿಧಾಲಾಪ ಪ್ರಚಂಡ ಪ್ರಲಾಪದ
ಓಲಗ ಬಾಜಿಸಿರಿ !
ಬೊಜ್ಜೆಯ ಕುಟ್ಟಿಲೆ ಕರುಣಿಗಳರಸೇ !
ಮಾನವನೆಂಬುವ ನಿನ್ನೀ ಕುನ್ನಿಯು ಮಾಡಿದ ಪಾಟಕ್ಕೆ
ಇಂತಹ ಪಾಪಿಯು ಲೋಭಿಯು ಕೋಪಿಯು ಹುಟ್ಟಿಸಿದೇತಕ್ಕೆ ?

೪

“ ಮುಕ್ಕಣ್ಣನ ಆ ಮೂರು ಕಣ್ಣುಗಳು
ಕುರುಡೇ ಕುರುಡೇ ?
ಭೂ–ಶ್ರೀಪತಿಯಾ ನಾಲ್ಕೂ ಕೈಗಳೂ
ಮೊಂಡೇ ಮೊಂಡೇ ?
ವೇದವುಸಿರಿದನ ನಾಲ್ಕೂ ಮುಖಗಳು
ಮೂಕೇ ಮೂಕೇ ?
ಅಸುರರೆಂಬುವರು ಕೊಳೆಯದ ಹೊಣಗಳೊ?
ಮುಚ್ಚದ ಕಣ್ಗಳು ಮುಚ್ಚಿದ ಕಣ್ಗಳೊ ? ”
ಏನಿದು ಏನಿದು ಏನನ್ಯಾಯ ?
ಶಾಂತಂ ಪಾಪಂ ಒಳಿತೋ ಒಳಿತು
ದೇವಿಯ ಪೂಜೆಗೆ ಹೆಸರಿಡಬೇಕೇ ?
ಇಂತಹದೆಂದದು ತಾ ಕೆಡಬೇಕೇ ?
ನೆತ್ತರ ಹೇಡಿಯೆ ಮುಚ್ಚೆಲೆ ಬಾಯ !
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು !

ಇದುವೇ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ !

೫

ಬಲವೆಂಬುದು ಇದು ಜೀವರಿನ ಬಳ್ಳಿ
ಕಾಳಗವೆಂಬುದು ನೆತ್ತರ ಹೂವು
ಬಿಡುಗಡೆಯೆಂಬುದು ಸಾವಿನ ಹಣ್ಣು
ಇನ್ನೂ ಇನ್ನೂ ಇನ್ನೂ ಇನ್ನೂ
ಪಂಚಮುರಾದಿಃ ಪಂಚವರ್ಣವೇ
ಪುಟಿಸು ಪಾಂಚಜನ್ಯ !
ಭೂಮಿತಾಯಿಯೇ ಜ್ವಾಲಾಮುಖದಿಂದೂದು ಶಂಖವನ್ನು
ನಿಲ್ಲಲಿ ನಟರಾಜನ ನಾಟ್ಯ
ಭಂಗಪಡೆಯಲಿಃ ಬ್ರಹ್ಮಸಮಾಧಿ
ತೋಗಲಿ ಹಾಲಿನ ಕಡಲಲಿ ಮಲಗಿದ
ದೇವನ ನಿದ್ದೆಯು ಹಾಳಾಗಿ !
ನೋಡಲಿ ನೋಡಲಿ ನೋಡಲಿ ಅವರು
ಮೂವರು ಕೂಡಿ, ರಚಿಸಿದ ಮೂರಾಬಟ್ಟೆಯ ನಾಟಕವ !
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು !
ಇದುವೇ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ !

೬

“ ಏನಿದು ಏನಿದು ಏನಿದು ” ಎಂದು
ದೇವರ ಜಂಗುಳಿ ಕಿರಿಚುವದೇಕೆ ?

ನರಬಲಿ

ಇದು ಮಾನವತೆಯು ಮೊಳಗುವ ಕಾಲ !
ನಾಗರಿಕತೆಯುಃ ಬೆಳಗುವ ಕಾಲ
ಕ್ರೈಸ್ತನ ಬೋಧೆಯು ಉಬ್ಬಿಹ ಕಾಲ
ಬಿಳಿಛಾಯೆಯು ತಾ ಹಬ್ಬಿಹ ಕಾಲ !
ಜೀವದಯಾ ಸಂಘದ ಸುಳಿಗಾಲ !
ಹಿಂಸೆಯ ಕ್ರೌರ್ಯಕೆ ಇದು ಅಳಿಗಾಲ !
ಶಾಂತಿಪುರಾಣವ ಹೇಳುವ ಕಾಲ !
ಬುದ್ಧ ಚರಿತೆಯನು ಕೇಳುವ ಕಾಲ !
ಕೋಳಿಯ ಕೊಯ್ದರೆ ಕೆರಳುವರುಂಟು
ಕುರಿಯನು ಕೊಂದರೆ ಕೇಳುವರುಂಟು
ಕೋಣನ ಕಡಿದರು ಕಾಯುವರುಂಟು
ಗುಬ್ಬಿ ಮಾನವನ,
ಕೊಯ್ದರು, ಕೊಂದರು, ಕಡಿದರು ಏನು ?
ಕೊಂದನು ಆತನು ತನ್ನನೆ ತಾನು
ಸ್ವಾರ್ಥತ್ಯಾಗವಿದಾತ್ಮಾಹುತಿಯಿದು
ನರಬಲಿ ನರಮೇಧವು ಕೇಳು
ಅಶ್ವಮೇಧಕೂ ಸರಿಮೇಲು
ಇದುವೆ ಕಾಳಿಯ ಪೂಜೆಯು ಶುದ್ಧ !
ಇದಕೇ ಹುಂಬರು ಎಂಬರು ಯುದ್ಧ !

೩೩. ಹುದುಗಲಾರದ ದುಃಖ

ಹುದುಗಲಾರದ ದುಃಖ ಹುಗಿದಿರಿಸಿ ನಗೆಯಲ್ಲಿ
ನಸುನಗುತ ಬಂದೆ ಇದಿರು;
ಇನಿತು ತಿಳಿಯದ ಮೂರ್ಖನೆಂದು ಬಗೆದೆಯೆ ನನ್ನ
ಇದು ಯಾವ ಊರ ಚದುರು ?

ಕೈಮುಟ್ಟಿ ಮೈಮುಟ್ಟಿ ನನ್ನ ಮನ ಸಂತೈಸ-
ಲೆಂದು ಬಗೆವವಳು ನೀನು,
ನಾನದನೆ ಬಯಸುತಿಹ ಸೊಗಸುಗಾರಿಕೆಯವನೆ
ನಾನೆನೆಯು ಕಟುಕನೇನು?

ಮುಗುಳುನಗೆಯರಳಿಸುತ ಕರಿಯಾಲಿ ಹೊರಳಿಸುತ
ಸುಳ್ಳುಸುಖ ಮೆರೆಸಬಹುದೆ ?
ಮಮತಾಜಳನು ಹುಗಿದು ತಾಜಮಹಲನು ಕಟ್ಟಿ
ನಿಜದುಃಖ ಮರೆಸಬಹುದೆ ?

ಎಲೆಲೆ ಜೀವದ ಗೆಳತಿ ! ನನ್ನೆದೆಯ ಗುಡಿಯಲ್ಲಿ
ನೀನು ಆಟವಾಡಿಸುತಿರಲು
ನಿನ್ನ ನಗೆ ಸುಖದ ಹೂವೆಂದು ತಿಳಿಯಲಿ ಹೇಗೆ
ಅಂತಿಂತು ನಟಿಸುತಿರಲು ?

೩೪. ಚಿಂತೆ

೧

“ ಮೊಗದಲ್ಲಿ ಬಲು ದೈನ್ಯ
ಎದೆಯಲ್ಲಿ ಬರಿ ಶೂನ್ಯ
ಚಿತೆಯೆ ಮೈದಾಳಿತೆಂಬಂತಿದಾರೆ ?
ಕಣ್ಣು ಕತ್ತಲೆಗೂಡು
ಹಣೆಯು ಮಸಣದ ಬೀಡು
ಬಹಳು–ಬರುವಂತೆ ಗತಯುಗದ ತಾರೆ :

೨

“ ಮೈಗೆ ಮಂಜಿನ ಮುಸುಕು
ಹಾಸಿ ಸಿಸಿರದ ನಸುಕು
ಬಿರುಸಿನೊಲು ಬಿಗಿದಿಹಳು ಅರಸುಕನ್ನೆ !
ಉರಿಯ ಸೀರೆಯನುಟ್ಟು
ಬೆಂಕಿಗುಪ್ಪಸ ತೊಟ್ಟು
ಧೀರೆ ಗಂಭೀರೆ ನೀನಾರೆ ಅನ್ಯೆ ?

೩

“ಹುಚ್ಚಿ ಊರ್ವಸಿಯಲ್ಲ
ತುಚ್ಛಿ ರಂಭೆಯು ಅಲ್ಲ
ಆ ಮುರಳಿ ಮೇನಕೆಯ ಛಾಯೆಯಿಲ್ಲ
ತವಸಿಯನೊ ಅರಸನನೊ
ವಿರಸನನೊ ಸರಸನನೊ
ನೀನಾರನಾರಿಸುವೆ ? ಆವ ನಲ್ಲ ? ”

೪

“ ಉಚ್ಚ ನೀಚರದೆಂಬ
ಭೇದಭಾವವ ಕಾಂಬ
ಸುರರ ಸೂಳೆಯು ಅಲ್ಲ. ಮನೆಗೆ ಮನೆಗೆ
ಯಾವ ಬಡವನೆ ಇರಲಿ,
ಮತ್ತೆ ಬಲ್ಲಿದನಿರಲಿ,
ಎಲ್ಲರಲ್ಲಿಯು ಸಮನೆ ಮಮತೆ ನನಗೆ.

೫

“ ನನಗೆ ಸಾವಿರ ದಾರಿ
ರೆಕ್ಕೆಯಿಲ್ಲದೆ ಹಾರಿ
ಎಲ್ಲರೆದೆಯನು ಸೇರಿ ಟೊಣೆಯುತಿಹೆನು
ಜಗದ ಜೀವಿಗಳುರವು
ನನ್ನ ಅಂತಃಪುರವು
ಅಲ್ಲಿ ಸೂಜೆಗಳಿಂದ ಹೆಣೆಯುತಿಹೆನು.

೬

“ ನನ್ನ ಕುರುಳುಗಳಲ್ಲಿ
ಜನರ ಕರುಳುಗಳನ್ನು
ಹುರಿಗೊಳಿಸಿ ಹಗ್ಗಗಳ ಹೊಸೆಯುತಿಹೆನು;
ಆ ಹಗ್ಗಗಳ ಮಾಲೆ–
ಗಳ ಸಾಲುಗಳ ಸಾಲೆ
ಧರಿಸಿ ಕೊರಳಲಿ ಜಗಕೆ ಎಸೆಯುತಿಹೆನು. ”

೭

ತುಟಿಯಲ್ಲಿ ನಗೆಯ ಹೆಣ–
ವೆಂಬಂದದೊಂದು ಕಣ
ಮಾತ್ರ ನಗೆಬಗೆಯು ಮಿಸುಕಾಡುತಿತ್ತು;
ಅವಳುಸಿರು ತಣ್ಣ್ಬದಿ–
ಯನ್ನು ಎತ್ತಲು ಊದಿ
ಮೃತ್ಯುವಿನ ಮುಂಗೆಲಸ ಮಾಡುತಿತ್ತು !

೮

ಆ ತ್ರಿಶಂಕುಸ್ವರ್ಗ–
ದಿಂದ ಬಂದೆಯೆ ಅಗ್ಗ–
ದಪ್ಸರೆಯೆ ನೀ ಬೀದಿ–ಬಸವಿಯಾಗಿ !
ಹೇ ಸ್ವಯಂವರ ಧನ್ಯೆ !
ಎಲೆ ಚಿರಂತನ ಕನ್ಯೆ !
ವರಿಸನಾರೂ ನಿನ್ನ ತಾನೆಯಾಗಿ.

೩೫. ಹೂ

ಚಂದಿರನ ಮೂಡಿಸಲು
ಮನದಲ್ಲಿ ನೆನೆಯುತಿರೆ
ಮೊಳೆತ ಚಂದದ ನನೆಯು ಮುಂಗುರುಳ ಪಡೆದ

ಬ್ರಹ್ಮನೆ ಸಮಾಧಿಯಲಿ
ಒಲವಿನಲಿ ನಲಿವಿನಲಿ
ಚೆಲುವಿನಾ ಕಾಣಿಕೆಗೆ ‘ ಹೂ ’ ಎಂದು ಎಂದ.

ಆ ಚೆಲುವನಾ ಒಲವ-
ನಾ ನಲಿವನೆಲ್ಲೆಲ್ಲು
ಕಣ್ಣಾರೆ ಮನವಾರಲೆಂದು ಹೊರ ಹಡೆದ.

‘ ಹೂ ’ ಎಂಬ ಮನದುಸಿರೆ
ನೆಲದ ಬಸಿರಲಿ ಮೊಳೆದು
ಮಣ್ಣಿನಾ ಮಾಸದಲಿ ಮಾಸದಲೆ ಬಳೆದು;

ತಂಗಾಳಿಯೊಡ ಬಂದ
ಮುಂಗಾರ ಮಳೆಗೆದ್ದು
ಗಿಡಬಳ್ಳಿಗಳ ಕೊನೆಗೆ ರೂಪವನು ತಳೆದು;

ನನೆಯಾಗಿ ಮೊನೆಯಾಗಿ
ಮುಗುಳಾಗಿ ಅರಳಾಗಿ
‘ ಪುಃ’ ಎಂದು ಬಿಟ್ಟುಸಿರೆ ತಾನೆ ಹೆಸರಾಯ್ತು.

ಹೂ

ಒಂದರೊಲು ಒಂದಿಲ್ಲ
ಒಂದರೊಳು ಕುಂದಿಲ್ಲ
ಒಂದೊಂದು ಅಂದವೂ ತನತನಗೆ ಚೆಂದ ;

ಚೆಂದಕ್ಕೆ ಒಂದೆ ನೈ
ಸಾಲದೆಂಬಂತೆ ನೂ–
ರೊಂದು ನೈದಾಳಿ ಕುಣಿಯುಪದು ಸ್ವಚ್ಛಂದ.

ಹೂವೆ ಚಂದಕೆ ಅರಸ
ಚೆಂದದೊಳು ಇಮ ಸರಸ
ಇದುವೆ ಚೆಂದದ ಗುಡಿಯ ಗೋಪುರಕೆ ಕಳಸ.

ಇದುವೆ ಚೆಂದದ ಕುಸುರು
ನರುಗಂಪು ಇದರುಸಿರು
ಇದಕೆ ' ಹೂ ' ಎಂಬ ಹಗುರಾದ ಸವಿಹೆಸರು.

೩೬. ಬಾಳ ಕರವಾಳ

ಇದೊ ಬಾಳ-
ಕರವಾಳ
ಎಂಟು ಎದೆಯ
ಬಂಟ ಬಡವ
ಇದನು ಅವನು
ಎಂತು ಪಿಡಿವ ?
ಇದರ ಇದಿರು
ಮಿಂಚು ಹಿಂಚು ;
ಇದರ ನುಡಿಗೆ
ಸಿಡಿಲು ಸಡಿಲು;
ಗುಡುಗು ನಡುಗು
ಇದರ ಬದಿಗೆ ;
ರಾಮಚಾಪ
ಏನು ಪಾಪ !
ಇದರ ದೊರೆಯೆ ?
ನರನ ಬಿಲ್ಲು
ಇದಕೆ ಹುಲ್ಲು
ಇದರ ಸರಿಯೆ ?

* * *

ಗಂಡುಗಣ್ಣ
ಕುಲುಮೆಯಲ್ಲಿ
ಕೆಂಚಕಾಯ್ದು
ಕೆಂಡವುಂಡು,
ಹೆಣ್ಣ ಕಣ್ಣ

ಬಾಳ ಕರವಾಳ

ಅಳಲ ಹೊನಲ
ಬಿಚ್ಚನೆಚ್ಚ
ನೀರ ಹೀರಿ
ಬೆಳೆದ ಬಾಳ
ಕೈಯು ಹಿಡಿವ
ಗಂಡು ಆಳ
ನಾಽ ಕಾಣೆ;
ಬಾಳ ಆಣೆ;
ಎಂಥ ಪಂಥ
ಎಂಥ ಪಂಥ ?

* * *

ಈ ಬಾಳ
ಕರವಾಳ
ಇದರ ಹಿಡಿಕೆ
ಬುವಿಗು ಹಿರಿದು.
ಮಿಗಿಲು ಮುಗಿಲು
ಒರೆಗೆ ಬರದು.
ಇದರ ಬಾಯಿ
ಸಾವ ತಾಯಿ,
ನಿನ್ನ ಕತ್ತ
ಕುತ್ತಿ· ಕುಣಿವ
ಕುತ್ತ ಇತ್ತ
ಜನ್ಮವೆತ್ತು

ಬಾಳ ಕರವಾಳ

ಬಂತು ಬಂತು
ಎಲವೊ ಜಂತು !
ಅಂತು ಇಂತು
ಎಂತು ಎಂಬ
ಹೇಡಿ ! ಎಡಿ–
ಯಾಗು ಹೋಗು !
ಇಲ್ಲಿ ಇಲ್ಲ
ನಿನ್ನ ತುತ್ತು.

* * *

ಇದರ ಸೊಲ್ಲ–
ದಾವ ಬಲ್ಲ ?
ದೇವ ಬಲ್ಲ–
ನೇನೊ ಎಲ್ಲ !
ಈ ಬಾಳ
ಕರವಾಳ
ಇದರ ಉಕ್ಕು
ದೇವನುಕ್ಕು ;
ನಾನೆ ತಾನೆ
ಸಾಣೆಗಲ್ಲು ;
ಹೊತ್ತು ಹೊಲವು
ಮೃತ್ಯು ಹುಲ್ಲು.
ಸೂರ್ಯ ಚಂದ್ರ
ಮಿಕ್ಕುಗಾಳು.

ಬಾಳ ಕರವಾಳ

ಚಿಕ್ಕೆ ಚುಕ್ಕೆ
ಹೊಟ್ಟೆ ಹಾಳು.
ಈ ಬಾಳ
ಕರವಾಳ
ಹಿಡಿವ ಗಂಡು
ಹುಟ್ಟುವಂದು
ಮುಗಿಲು ಭುಗಿಲು
ನೆಲಕೆ ದಿಗಿಲು
ಇರುಳು ಮರುಳು
ಸಾವು ಸುಳ್ಳು
ಜೀವ ದೇವ
ಹಗಲೆ ಹಗಲು.

೩೭. ಮೈಸೂರು

“ ಮೈಸೂರ ಮೈಸಿರಿಯು ಸೂರೆಗೊಂಬುದು ಮನವ
ಮೈ ಚೆನ್ನ ನಗೆ ಮಿಂಚು ಬಾವನ್ನದುಸಿರು
ನಯದ ವಿನಯದ ನುಡಿಯು ಮಾತು ಸಂಗೀತ ;
ಏನು ಸೊಗಸಿದು ಎನಿತು ಸೊಬಗು ಗೆಳೆಯ. ”

“ ಬಾಯ್ಮುಚ್ಚು ಸುರಿಸದಿರು ಜೊಲ್ಲನೀತೆರದಲ್ಲಿ
ಹೊನ್ನೆಲ್ಲ ಹೊರಮಿಂಚು, ಮಿಂಚೆಲ್ಲ ಸುಡುಬೆಂಕಿ,
ಉಸಿರು ಬರಿ ಹೆಸರು, ನಯ ಭಯದ ಕುರುಹು,
ಮಾತುಕತೆ ಸಂಗೀತ ಸೊಗಸು ಸೊಬಗುಗಳೆಲ್ಲ
ಬೇರೆ ತಾಳಕೆ ಕುಣಿವ ಸೂಳೆ–ಬೆಡಗು. ”

“ ಕೆರಳದಿರು ಎಲೆ ತರಳ, ಕಂಡುದನೆ ಕಂಡು
ಕೆಂಡದಂತಾಗದಿರು,
ಕಂಡುದರ ಕಿಂಡಿಯೊಳಗಿಂದಲಾಚೆಗೆ ನೋಡು
ನೋಟ ಬೇರೊಂದ—

“ ಅಳಿದುದೊಡಲೊಳಗಿಟ್ಟು ಉಳಿದುದಕೆ ಎಡೆಗೊಟ್ಟು
ಬೆಳೆದುದಕೆ ಇಂಬಾಗಿ
ಹಿಗ್ಗುತಿದೆ ಬಯಲು—

“ ತರಗನ್ನು ಮಣಿಸುತ್ತ ಚಿಗುರನ್ನು ಕುಣಿಸುತ್ತ
ಹಾದಿಹುಡಿಯೊಳಗಿದ್ದ ಹೊನ್ನ ಕಿಡಿಯನ್ನೆತ್ತಿ,
ಹಕ್ಕಿ ಚಿಕ್ಕಿಗಳೊಡನೆ ಪಟ್ಟುಗಟ್ಟಿ,
ಸ್ವೈರವಾಗುತ ಬೀಸಿ ಸ್ವಚ್ಛಂದದೊಳಗೀಸಿ,
ಕಾಣದಲೆ ಹುರಿಗೊಳಿಸುತಿಹನು ಮಾರುತನು.

" ಗಣಿತ ಗುಣಿತಕೆ ಸಿಗದ
ಪ್ರಾರ್ಥ ಪ್ರಾರ್ಥಪ್ರಾಯ
ತಾರೆಗಳ ಬಳಗದಲಿ ತನ್ನೊಂದ ಎಡಬಿಡದೆ
ಬೆಳಕ ಬಿಂಕವ ತೊರೆದು
ಪಾರಿದೋರುವ ನೆಪದಿ ನಿಂತಿಹನು ಧ್ರುವನು.

" ಮೊರೆ ಮೊರೆದು ಮನೆ ತೊರೆದು
ಬೆಟ್ಟಗಳ ಸಾಲ್ಕೊರೆದು
ಬಂಜೆತನವನು ಹರಿದು
ದಡದ ಹಸಿರಲಿ ಮೆರೆದು
ಬರುತಿಹುದು ಮಲೆನಾಡ ಹುಚ್ಚು ಹೊನಲು.

" ಜನರ ಕಡಲಲಿ ಹುಟ್ಟಿ ಬಂದ ನಂಜನು ನುಂಗಿ
ಭೈರವನ ತಾಂಡವಕೆ ತನ್ನ ಮುಂದಲೆ ನೀಡಿ
ತಾಳಿ ಬಾಳುವೆನೆಂಬ
ಪಂಥದಿಂದಲಿ ಚಲಿಸದಿಹುದು ನೆಲವು.

" ಪಂಚಭೂತಗಳಿಂತು ಹೊಂಚು ಹಾಕಿರಲಾಗಿ
ಸಂಚು ಕೂಡದಲಿರದೆ ಹೊಸದೊಂದು ಜಗಕೆ ?
ಕಾಣದೇ? ಕಾಣದೇ? ಈ ಕಣ್ಣು ಮುಚ್ಚಿ ತೆರೆ
ಆ ಕಣ್ಣನೊಂದ. "

೩೮. ಬೆಕ್ಕು ಹಾರುತಿದೆ ನೋಡಿದಿರಾ?

('ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದ ಅಣಕವಾಡು.)

ಇರುಳ್ಳ್ಯಿರುಳಲು ಮಾಡವು ಬೆಳಗೆ
ಅತ್ತಲಿತ್ತಲೂ ಕತ್ತಲೆಯೊಳಗೆ
ಯಾವುದ! ಯಾವುದ! ಯಾವುದ ಎಂದು
ಕೇಳುವ ಹೇಳುವ ಹೊತ್ತಿನ ಒಳಗೆ
ಬೆಕ್ಕು ಹಾರುತಿದೆ ನೋಡಿದಿರಾ ?

ಕರಿ–ನೆರೆ ಬಣ್ಣದ ಮೊಸಡೆಯು ಗಂಟು
ಬಿಳಿ–ಹೊಳೆ ಬಣ್ಣದ ಮೀಸೆಗಳೆಂಟು
ಹಚ್ಚನ ಬೆಚ್ಚನ ಪಚ್ಚೆಯ ಪೈರಿನ
ಬಣ್ಣದ ಕಣ್ಣು ಕಿವಿ ಬವಿಗುಂಟು
ಬೆಕ್ಕು ಹಾರುತಿದೆ ನೋಡಿದಿರಾ ?

ಕಾಡಿಗೆಗಿಂತಲು ಕಪ್ಪೇ ಬಣ್ಣಾ
ಕತ್ತಲಕೇ ಕಾಲೊಡೆದವೊ ಅಣ್ಣಾ
ಕೂದಲ ಕೂದಲ ನಿಗುರಿಸಿಕೊಂಡು
ಸೂರ್ಯ–ಚಂದ್ರರೊಲು ಮಾಡಿದೆ ಕಣ್ಣಾ
ಬೆಕ್ಕು ಹಾರುತಿದೆ ನೋಡಿದಿರಾ ?

ರಾಜ್ಯದ ಹೆಗ್ಗಣಗಳ ತಾನೊಕ್ಕಿ
ಜೊಂಡಿಗದಾ ಹುಲುಗಡಣವ ಮುಕ್ಕಿ
ಹಾರಿಸಿ ಹೇಂಟೆಯ ಹಿಂಡುಹಿಂಡುಗಳ
ಜಂಭದ ಕೋಳಿಯ ನೆತ್ತಿಯ ಕುಕ್ಕಿ
ಬೆಕ್ಕು ಹಾರುತಿದೆ ನೋಡಿದಿರಾ ?

ಬೆಕ್ಕು ಹಾರುತಿದೆ ನೋಡಿದಿರಾ ?

ಹಾಲಿನ ಗಡಿಗೆಯ ತಳವನು ಒರಸಿ
ಮೊಸರಿನ ಮಡಿಕೆಯ ಮುಚ್ಚಳ ಸರಿಸಿ
ಉರುಳಿಸಿ ಹೊರಳಿಸಿ ಭಾಂಡ ಭಾಂಡಗಳ
ಬಿಸಿ ಹಾಲಲಿ ತುಸು ಮಜ್ಜಿಗೆ ಬೆರಸಿ
ಬೆಕ್ಕು ಹಾರುತಿದೆ ನೋಡಿದಿರಾ ?

ಇಲಿಗಳು ಬೆಳ್ಳಗೆ ಇದ್ದರು ಬಿಡದು
ಬೆಳ್ಳಗಿದ್ದುದನು ಕುಡಿದೂ ಕುಡಿದು
ನೋಡಿ ಚಂದ್ರನನು ಬೆಣ್ಣೆಯದೆಂದೊ
ಮುಗಿಲಿನಂಗಳಕೆ ಸಿಟ್ಟನೆ ಸಿಡಿದು
ಬೆಕ್ಕು ಹಾರುತಿದೆ ನೋಡಿದಿರಾ ?

ಹಿಂದಕೆ ಮುಂದಕೆ ಚಾಚಿದೆ ಕಾಲ
ಉಬ್ಬಿಸೆಬ್ಬಿಸಿದೆ ಜೊಂಡಿನ ಬಾಲ
ಬೆಳುದಿಂಗಳ ಹಾಲೆನೆ ತಿಳುಕೊಂಡೊ
ಬಲ್ಲರು ಯಾರಿವರಪ್ಪನ ಸಾಲ !
ಬೆಕ್ಕು ಹಾರುತಿದೆ ನೋಡಿದಿರಾ ?

೩೯. ಕೀರ್ತಿ

ನಾಳಿನಾ ಒಡಲಿನಲಿ
ಉಸುರಿನಾ ಕಡಲಿನಲಿ
ಪೆಸರ ಹಡಗುಗಳೆಷ್ಟೊ ತೇಲುತಿಹವು
ನಕ್ಕವರ ಅತ್ತವರ
ಸಾಯುವರ ಸತ್ತವರ
ಕಣ್ಣು ಅವುಗಳ ಕಂಡು ಸೋಲುತಿಹವು.

ಅಲೆಗಳಲೆಪಾಟದಲಿ
ತೆರೆಗಳೇರಾಟದಲಿ
ಕಡಲಟ್ಟದಲಿ ಹೊತ್ತು ಕುಣಿಯುತಿಹುದು.
ಉಸಿರ ಗುಳ್ಳೆಗಳೊಡನೆ
ಪ್ರತಿ ಹಡಗು ಒಡೆದೊಡನೆ
ಸಾಕಾಗಿ ಮುಳುಮುಳುಗಿ ದಣಿಯುತಿಹುದು.

ತೇಲಿದ್ದು ತೇಲಿತ್ತು
ಮುಳುಗಿದ್ದು ಮುಳುಗಿತ್ತು
ಗಾಳಿನೀರ್ ಬಾಳು ಒಗುಮಿಗುತಲಿಹುದು.
ಮೇಲೆ ಕೀರ್ತಿಯು ಹಾಯಿ
ಶಾಪ ಬಿಡುತಿದೆ ಬಾಯಿ
ತೆರೆಸೊರೆಯುಲಿತಿಹಾಸ ನಗುತಲಿಹುದು.

* * *

ತನ್ನ ಮರುಕಿಗೆ ಮರುಗಿ
ಆಣೆಕಲ್ಲೊಲು ಕರಗಿ
ಬಿಟ್ಟ ನಿಟ್ಟುಸಿರೆ ಚಂದನದ ತಂಪು.

ಕೀರ್ತಿ

ತನ್ನ ಹಿಗ್ಗಿಗೆ ತೆರೆದ
ಆ ಸುಖಸರೋವರದ
ನಗೆಯು ಸ್ಫೈದಿಲವೆ ನಂದನದ ಕಂಪು.

ಇಂಥ ಸಂತೋಷವನು
ಬಾಳಿನಲಿ ಪಡೆಯದನು
ಉಸಿರಾಡಿಸಿದರೇನು ಅದುವೆ ದಣಿವು.
ಕೊನೆಬಿಕ್ಕು ಬಂದಾಗ
ಇಡುಗಂಗೆ ತಂದಾಗ
ಹನಿಯೊಂದು ಕುಡಿಸಿದರೆ ಏನು ತಣಿವು?

ಅವನು ಬೇಡಿದ್ದಿತ್ತು
ಸ್ನೇಹ ಮಮತೆಯ ತುತ್ತು
ಬಡಪ್ರಾಣಿ ಕೊನೆಗಿಲ್ಲಿ ಏನು ಉಂಡ?
ಅವಗೆಲ್ಲಿ ಕಣ್ಣೀರು
ಜೊಳ್ಳೆಳ್ಳು ತಣ್ಣೀರು
ಮೇಲೆ ಕೀರ್ತಿಯು ಶುಭ್ರ ಕಾಕಪಿಂಡ.

ಆರದಂಥವನಾರು
ಕುಡಿದು ಪ್ರೀತಿಯ ನೀರು?
ಅಮೃತಫಲ ತಾನೆ ತಾನುಂಡ ಹಣ್ಣು.
ಅಮೃತಕೀರ್ತಿಯ ತಿರುಳು
ಮೋಡಗಳ ನೀರ್ನೆರಳು
ಮೃತನಿಗದು ಇದ್ದವರು ಕೊಟ್ಟ ಮಣ್ಣು.

ಹಳುವ ತಪ್ಪಿದ ಹಕ್ಕಿ
ಬಟ್ಟಬಯಲೊಳು ಸಿಕ್ಕಿ–
ಕೊಂಡು ತೊಳಲಾಡುವದು ಗೂಡಿಗಾಗಿ.
ಪ್ರತಿಯೊಂದು ಜೀವವೂ
ಪ್ರತಿಯೊಂದು ಭಾವವೂ
ಹುಡುಕುವದು ತನ್ನೊಂದು ನಾಡಿಗಾಗಿ.

ಗೂಡು ಹುಡುಕುವ ಹಕ್ಕಿ
ನಿನ್ನ ಎರಡೂ ರೆಕ್ಕಿ
ಮನೆ ಸಿಗುವವರೆಗೆ ಬಲಗುಂದದಿರಲಿ.
ಗಾಳಿ ಬಯಲಿನ ಬೀದಿ
ಹೆಜ್ಜೆ ಮೂಡದ ಹಾದಿ–
ಯಲ್ಲಿ ಕುರುಹನು ಕಾಂಬ ಕಣ್ಣು ಬರಲಿ.

* * *

ತನ್ನವರ ಸುಖದುಃಖ
ತನ್ನದೆಂಬುವ ಲೆಕ್ಕ,
ತನ್ನ ಸುಖದುಃಖ ತನ್ನವರದೆಂಬ
ಸಾನುಭೂತಿಯು ಸೊಗವು
ಸ್ವಾನುಭೂತಿಯು ಜಗವು
ಇದುವೆ ಜೀವನವು; ಉಳಿದದ್ದು ಜಂಬ.

ಕೊರಳು ಬೆರಳಿನ ನಾದ–
ದಲ್ಲಿರಲು ಸಂವಾದ
ಆ ಏಕನಾದವೂ ಅಮರಗೀತ.

ಕೀರ್ತಿ

ಈ ಸುಖದ ಬಂಗಾರ
ಜೀವನದ ಸಿಂಗಾರ
ಹೆಸರ ಕೀರ್ತಿಯು ಮಾತ್ರ ವಜ್ರಪಾತ.

ಜೀವನದ ರಸವೀಣೆ
ಲೀನೆ ತನ್ನೊಳು ತಾನೆ
ಆಗೆ, ತೃಪ್ತಿಯನೆಂತು ಪಡೆಯಬಹುದು.
ತನ್ನ ಮಾತಿನಲೆಲ್ಲ
ವಿಶ್ವಜೀವದ ಸೊಲ್ಲು
ನುಡಿಯುತಿರೆ ಜೀವಕ್ಕೆ ಮುಕ್ತಿಯಹುದು.

ಹುಟ್ಟಿಸಲು ಅಸಮರ್ಥ–
ವಾದ ಸಂತಸ ವ್ಯರ್ಥ !
ಸಂತಸದ ಸಂತಾನ ಅಮೃತವೆಂಬೆ.
ಮುಗುಳು ನಗೆಗಳ ಮಾಲೆ
ಮುಡಿದುಕೊಂಡಿಹ ಬಾಲೆ
ಜೀವನವೆ ! ನಿನ್ನಳಿದು ಬೇರೆ ನಂಬೆ.

ವ್ಯರ್ಥ ಜನ್ಮವು ಬೇಡ
ರಿಕ್ತ ಕೀರ್ತಿಯು ಬೇಡ,
ಸಂತಾನ ಸಾಕು, ಏಕಮರಲೋಕ ?
ಇದ್ದವರ ಎದೆಯಲ್ಲಿ
ತನ್ನ ಬಗೆ ಇರಲಲ್ಲಿ
ಸಪ್ತಸ್ವರ್ಗಕ್ಕು ಅದು ಹೆಚ್ಚು ತೂಕ.

೪೦. ಚೆಲುವ

ಯಾರವ್ವಾ ಇವ ಚೆಲುವಾ
ತನ್ನಷ್ಟಕ್ಕs
ತಾನs ನೋಡಿ ನಲಿವಾ !

೧

ನಗಿಯೊಂದು ಬಗಿಯಾಟಾ
ಕಣ್ಣುಹಿಗ್ಗಿನ ತೋಟಾ
ಚವತೀ ಚಂದ್ರಮನ್ಹೋಲುವಾ ;
ಚವತೀ ಚಂದ್ರಮ ಕೆಳಗ
ಹಣಿಕಿ ಹಾಕೀಹ್ಹಾಂಗ
ಹೋಲುವಾ ಹಣಿಯೊಲವಾ
ನೋಡವ್ವಾ
ಯಾರವ್ವಾ ಇವ ಚೆಲುವಾ !

೨

ಒಡೆದಿಲ್ಲs ಇನ್ನೂ ಮುಕಮೀಸಿ
ಒಡೆದಿಲ್ಲ ;
ತೊಡೆದಿಲ್ಲs ಇನ್ನೂ ತುಟಿಹಾಲು
ತೊಡೆದಿಲ್ಲ ;
ಹಿಡಿದಿಲ್ಲs ಕಣ್ಣಿಗೆ ಹೆಣ್ಣುಚ್ಚು
ಹಿಡಿದಿಲ್ಲ.

ಚೆಲುವ

೩

ನೆಂಬಿಕೆಹೊಂಡಿರಲಾಕ
ತುಪ್ಪಳ ತಲೆದಿಂಬೊ
ಎಂಬೋ ತೋಳ್ಮಿದು ಬಲವಾ
    ಕಂಡವರ ಕಣ್ಣಾನ್ನ
    ಸೋತಾಗ ಸೆರೆಹಿಡಿದು
    ಇಡುವಂಥ ಎದೆ ಹರವಾ
        ನೋಡವ್ವಾ
ನೋಡವ್ವಾ ನನ ಗೆಣತಿ
ಮೂಲೆಗೂಸು ಇರುವಾಗಿನ
ಕಾಮಣ್ಣನೊಲು ಕಾಣುವಾ
    ಯಾರವ್ವಾ ಇವ ಚೆಲುವಾ
        ತನ್ನಷ್ಟಕ್ಕಽ
    ತಾನಽ ನೋಡಿ ನಲಿವಾ !

೪೧. ನಿರಾಶೆ

ಮಂಜಿಬ್ಬನಿಗಳು ಎರೆಯುವ ಠಾವು
ಬೆಟ್ಟದ ಕೋಡಲಿ ಬೆಳೆದಿತು ಹೂವು.

ಇದ ಮೂಸಿದರೂ ವಾಸನೆ ಇಲ್ಲ,
ಹುಟ್ಟಿತ್ತೇಕೊ ಹುಟ್ಟಿಸಿದವ ಬಲ್ಲ.

ನೀಳನ ತುಂಬಿನ ನಿಡುದುದಿಯಲ್ಲಿ
ಬಿರಿದಿತೊ ಹೂವಿನ ಎದೆಗುದಿಯಲ್ಲಿ ;

ಎರಡೇ ಎಸಳು ನಾಲ್ಕೇ ಪಕಳೆ
ಕಳೇವರದೊಳು ಕಂಡಿತೊಂದು ಕಳೆ.

ಇದೆ ಎನಿಸಿತು ಮೈಮಾಟದ ಚಂದ ;
ಎಲ್ಲಿದೆ ಇಲ್ಲದೆ ಮೈಮೆಯ ಗಂಧ?

ಕಣ್ಣನೆಳೆದರೂ ನೋಲಿಸಲಿಲ್ಲ
ಮನವ ಸೆಳೆದರೂ ಸೆರೆಗೊಳಲಿಲ್ಲ.

ಗಾಳಿ ತಟ್ಟಲಿದು ಅಲೆಯಲೆ ಇಲ್ಲ,
ತಟ್ಟಿದ ಗಾಳಿಯು ನಲಿಯಲು ಇಲ್ಲ.

ಸಟೆದ ಹೂವು ಸೆಟೆಸೆಟೆದೇ ಇತ್ತು,
ಬಿರುಗಾಳಿಯು ಮೈಮರಗಟ್ಟಿತ್ತು.

ನಿರಾಶೆ

ಹುಡಿಯಣುವಿಲ್ಲ ನೀರ್ನಿಂತಿಲ್ಲ
ಇದ ಹುಡುಕುವ ಅಳಿ ಬರಲೇ ಇಲ್ಲ.

ಏನಿದು ಬಾಳು ! ಹಾಳಿಗು ಹಾಳು ;
ಬದುಕನಣಕಿಸುವ ಕತ್ತಲೆಕಾಳು.

' ಹಾಗೂ ಉಂಟು ಹೀಗೂ ಉಂಟು
ವಿಧಿಯು ಹೊಸೆದ ಹಗ್ಗದ ಕಗ್ಗಂಟು '

ಸುತ್ತಣ ಗಾಳಿಯು ಬಿಸುಸುಯ್ದಿತ್ತು
ಅದಕೂ ಈ ಹೂ ಬಾಡದೆ ಇತ್ತು.

* * *

ಕಂಬನಿಗರೆದವು ಚುಕ್ಕಿಗಳೆಲ್ಲ
ಆದರಿದರ ಮೈ ನಾಂದಿರಲಿಲ್ಲ.

ನೇಸರು ಕಣ್ಣನು ಕೆಕ್ಕರಿಸಿದರೂ
ತಿಂಗಳು ಮುಳು–ಮುಳು ಬಿಕ್ಕಳಿಸಿದರೂ.

ಮಿಟಿ ಮಿಟಿ ಸ್ವರ್ಗದೊಳಿತ್ತು ಸಮಾಧಿ
ಕಾಣಲಿಲ್ಲ ಈ ಹೂವಿನ ಹಾದಿ.

ನಿರಾಶೆ

ಋತುಗಳ ಬಣ್ಣವು ತಿರುಗುತ್ತಿತ್ತು
ಚಿಟ್ಟೆ ಸವೆದು ಇಳೆಗೆರಗುತ್ತಿತ್ತು.

ಬರೆದೊಲು ಇದ್ದೊಲು ಇತ್ತು ವಿಚಿತ್ರ
ಪ್ರಕೃತಿಪುಟದೊಳ್ ಹೂವಿನ ಚಿತ್ರ.

೪೨. ಆಯಾಸ

ತನ್ನ ದಳವೆ ತನಗೆ ಭಾರ
ಕತ್ತನೆತ್ತಿ ನೋಡಲಾರ–
ದಾಗಲು ಹೂ ಬಿಸಿಲಿನಲ್ಲೆ
ಬೆಂದು ಬೆಂಡುಗೊಂಡು ಜಾರಿ
ತೊಟ್ಟುಬಿಟ್ಟು ಕಳಚಿ ಕೆಳಗೆ
ಬೀಳುವಂತೆ ಬಾಯಿಬಿಟ್ಟು
ಮಣ್ಣಿನಲ್ಲಿ ಕಣ್ಣನೆಟ್ಟು
ನೀರಮಣಿಯು ಹಾರವಾಗೆ
ಬೆವರ ಹನಿಯು ಭಾರವಾಗೆ
ಬಾಗಿಸಿತ್ತು
ಮೊಗವನು.

ಉಸಿರ ಬಿಡಲು ಉಸಿರೆ ಇಲ್ಲ
ಎದೆಯೂ ಎಸರು ಉಕ್ಕಲಿಲ್ಲ ;
ಬಿಕ್ಕು ಮೀರಿ ಮಿಕ್ಕಲಿಲ್ಲ
ತನಗೆ ತಾನೆ ನಕ್ಕಿತಲ್ಲ.
ಆಳದುಗುಡ ಮೂಡಲೇಕೆ
ದುಗುಡವಿರಲು ಅಳಲೆಬೇಕೆ ?
ಆಶೆ ಹಿಂಗಿ ಆರಲಿಲ್ಲ
ತಾನೆ ಇಂಗಿ ಆರಿತಿಲ್ಲಿ ;
ಬೆಳಕು ಹೊತ್ತಿ ಹಾರಲಿಲ್ಲ
ಬತ್ತಿ ಬತ್ತಿ ಆರಿತಿಲ್ಲಿ ;
ಇತ್ತು ಎಲ್ಲಿ ಮತ್ತೆ ಹಾದಿ
ಇದ್ದಕಿದ್ದ ಒಲು ಸಮಾಧಿ
ಕ್ಷಣ ಮೀರಿತು
ಯುಗವನೂ.

ಆಯಾಸ

ಅತ್ತ ಇತ್ತ ನೋಡಲೇಕೆ
ಸುತ್ತ ಗಾಳಿ ಆಳನೀರು,
ಬಾಳ ಕಾಡು ಜಟುಕು ಜೀರು ;
ಬದುಕಿನ ನಡುಕಟ್ಟಿನಲ್ಲಿ
ಕಟ್ಟೆ ಮೈಯು ಕಲ್ಲ ಜಲ್ಲಿ
ರಸವು ಆರೆ, ಗಾಳಿ ಹಾರೆ, ತೊಟ್ಟು ಜಾರೆ
ಮುಳುಗಿ ಮುಳು–ಮುಳುಂಗಿತು.
ಮೃತ್ಯು ಮೃತ್ಯು ಎಲ್ಲಿ ಇತ್ತು
ಜೀವ ಸಾವ ಬೆನ್ನ ನಟ್ಟಿ ತಾನೆ ಬಂದಿತು ;
ಸಾವು ಆದರ ಬೆನ್ನ ತಟ್ಟಿ ಹಿಂದೆ ನಿಂದಿತು.
ಮುಳುಗಿತಂದು ಮೊಗವದು,
ಮುಗಿಯಿತಂದು ಯುಗವದು,
ಕತ್ತಿನಿಂದ ತಾನೆ ಬಿತ್ತು ಜಿಗಿದ ಜಗದ ನೊಗವದು.

೪೩. ಪಾತರಗಿತ್ತಿ ಪಕ್ಕ

ಪಾತರಗಿತ್ತೀ ಪಕ್ಕಾ
ನೋಡಿದೇನಽ ಅಕ್ಕಾ !

ಹಸಿರು ಹಚ್ಚಿ ಚುಚ್ಚಿ
ಮೇಲಽಕರಿಸಿಣ ಹಚ್ಚಿ,

ಹೊನ್ನ ಚಿಕ್ಕಿ ಚಿಕ್ಕಿ
ಇಟ್ಟು ಬೆಳ್ಳೀ ಅಕ್ಕಿ,

ಸುತ್ತೂ ಕುಂಕುಮದೆಳಿ
ಎಳೆದು ಕಾಡಿಗೆ ಸುಳಿ,

ಗಾಳೀ ಕೇನೀಲೇನಽ
ಮಾಡಿದ್ದಾರ ತಾನ !

ನೂರು ಆರು ಪಾರು
ಯಾರು ಮಾಡಿದ್ದಾರು !

ಏನು ಬಣ್ಣಾ ಬಣ್ಣ
ನಡುವೆ ನವಿಲಗಣ್ಣಾ !

ರೇಶಿಮೆ ಪಕ್ಕ ನಯ
ಮುಟ್ಟಲಾರೆ ಭಯ !

ಪಾತರಗಿತ್ತಿ ಪಕ್ಕ

ಹೂವಿನ ಪಕಳಿಗಿಂತ
ತಿಳಿವು ತಿಳಿವು ಅಂತ ?

ಹೂವಿಗೆ ಹೋಗಿ ತಾವ
ಗಲ್ಲಾ ತಿವಿತಾವ.

ಬನ ಬನದಾಗ ಆಡಿ
ಪಕ್ಕಾ ಹುಡಿ ಹುಡಿ ;

ಹುಲ್ಲಗಾವುಲದಾಗ
ಹಳ್ಳೀ ಹುಡುಗೀ ಹಾಂಗ–

ಹುಡದೀ ಹುಡದೀ ಭಾಳ
ಆಟಕ್ಕಿಲ್ಲ ತಾಳ.

ಕಿರೇ ಸೂರೇ ಪಾನ–
ದಲ್ಲಿ ಧೂಳಿಸ್ನಾನ.

ತುರುಬಿ ತುಂಬಿ ತೋಟ–
ದಲ್ಲಿ ದಿನದ ಊಟ.

ಕಳ್ಳಿ, ಹೂವ ಕಡಿದು
ಹೂತುಟಿನೀರ ಕುಡಿದು ;

ಪಾತರಗಿತ್ತಿ ಪಕ್ಕ

ನಾಯಿಮಾ ಛತ್ತರಿಗ್ಯಾಗ
ಕೂತು ಮೋಜಿನಾಗ,

ರುದ್ರಗಂಟೆ ಮೂಸಿ
ವಿಷ್ಣುಗಂಟೆ ಹಾಸಿ,

ಹೇಸಿಗೆ ಹೂವ ಬಳಿಗೆ
ಹೋಗಿ ಒಂದs ಗಳಿಗೆ,

ಮದಗುಣಿಕಿಯ ಮುದ್ದು
ಹುರುಪಿಗಿಷ್ಟು ಮೆದ್ದು,

ಕಾಡ ಗಿಡ ಗಂಟಿ
ಅಂಚಿಗಂಟಿ ಗಿಂಟಿ,

ಸೀಗಿಬಳ್ಳಿ ತಾಗಿ
ಪಕ್ಕಾ ಜೆಳ್ಳಗಾಗಿ,

ಗೊರಟಿಗೆಗೆ ಶರಣ
ಮಾಡಿ ದೂರಿಂದsನ,

ಮಾಲಿಂಗನ ಬಳ್ಳಿ
ತೂಗೂ ಮಂಚದಲ್ಲಿ,

ತೂಗಿ ತೂಗಿ ತೂಗಿ
ದಣಿಧಾಂಗ ಆಗಿ,

ಬೇಲೀ ಬಳ್ಳಿಯೊಳಗ
ಅದರ ನೆರಳ ತೆಳಗ

ನಿದ್ದಿಗುಳ್ಯಾಡಿ
ಪಗಡಿ ಪಕ್ಕಾ ಆಡಿ,

ಗುಲಬಾಕ್ಷಿಯು ಹೂವ
ಕುಶಲ ಕೇಳತಾವ ;

ಹುಡಿಯು ನೀರಿನ್ಯಾಗ
ತುಳಕಿಸುತ್ತ ಬ್ಯಾಗ

ಹಡಿಯೆ ಬೀಜ ಗಂಡು
ಹಾರ ಹರಿಕಿ ಅಂದು,

ಅಡವಿ ಮಲ್ಲಿಗಿ ಕಂಡು
ಅದರ ಕಂಪನುಂಡು,

ಹುಲ್ಲ ಹೊಲಕ ಬಂದು
ಗುಬ್ಬಿ ಬೆಳಸಿ ತಿಂದು,

ಇಷ್ಟು ಎಲ್ಲಾ ಮಾಡಿ
ಸಪ್ಪಳಿಲ್ಲದಾಡಿ,

ತಾಳ ಚವ್ವ ಚಕ್ಕ
ಕುಣಿತ ತಕ್ಕ ತಕ್ಕ ;

ಆಸಿ ಹಚ್ಚಿ ಹ್ಯಾಂಗ
ಕಂಡು ಸಿಕ್ಕಧಾಂಗ

ಸಿಕ್ಕಲ್ಹೋಡತಾವ
ಅಲ್ಲ್ಯಾ ಇಲ್ಲ್ಯಾ ಅವs.

ಕಾಣದೆಲ್ಹೊ ಮೂಡಿ
ಬಂದು ಗಾಳಿ ಗೂಡಿ,

ಇನ್ನು ಎಲ್ಲಿಗೋಟ ?
ನಂದನದ ತೋಟ !

೪೪. ನನ್ನ ಕಿನ್ನರಿ

ನೋಡ್ ನೋಡ್ತಽ ದಿನಮಾನಾ ಆಡಾಡ್ತಽ ಆಯುಷ್ಯಾ
ನಡೆದಽದ ನಡೆದಽದ ನಡೆದಽದ
ಕಾಣದ ಕಡಲ್ಹಾದಿ ಹಿಡಿದಽದ
ಮುಳಗಾಂವ ಜೆಂಡಿಗೆ ತೇಕಿಮುಕ್ಕಿ ಬಿದ್ಧಾಂಗ
ನನ್ನಽ ಕಿನ್ನರಿ ನಿನ್ನ ಹಿಡದೇನ
ನಿನ್ನ ಜೀವದ ತಂತಿ ಮಿಡದೇನ.
ನೀರಾಸಿ ಕಸವಿಸಿ ಹಸಿವಿಯ ಹಸಿಬಿಸಿ
ಆರಽದ ಆರಽದ ಆರಽದ
ಆಸಿಯ ಹುಸಿಮುಬ್ಬು ಹಾರಽದ.
ಬಾಡಿದ ಮುಖದಿಂದ ಹತ್ತಿದೆ ಸುಖದ್ದಿಂದ
ಸಿಗದಽನ ಸಿಗದಽನ ಸಿಗದಽನ
ಸಿಗು ಬದುಕಲ್ಲೊಂದು ಬಗೆದೇನ.
ದಿನ ಬೆಳಗು ಅಂತೇನ ಆ ದಿನ ಬಂತೇನ
ಬರತಽನ ಬರತಽನ ಬರತಽನ
ಬಯಕಿಯ ಹಣ್ಣನ್ನ ತರತಽನ.
ಯಾರದೊ ಬೆಟ್ಟಿಗೆ ಮೂಡಲ ಸಿಟ್ಟಿಗೆ
ನೋಡ್ತಽನ ನೋಡ್ತಽನ ನೋಡ್ತೆಽನ
ಕಾಣದ್ದರ ಹಾಡೊಂದು ಹಾಡ್ತೇಽನ.
ಸಾವಿನ ಕುರುಹನು ಅನುದಿನ ಕಂಡೆನು
ನೊಂದೇನಽ ನೊಂದೇನಽ ನೊಂದೇಽನ
ಬದುಕುವದಿನ್ನೆಂದು ಅಂದೇಽನ.

೪೫. ಬಿಸಿಲುಗುದುರೆ

ಹಳ್ಳsದ ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತs
ಏನೊಂದು ನಗಿ ಇತ್ತ ಏನೊಂದು ನಗಿ ಇತ್ತ
ಏರಿಕಿ ನಗಿ ಇತ್ತs ॥ ಪಲ್ಲ ॥
ನಕ್ಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತs ॥ ಅನುಪಲ್ಲ ॥

೧

ಕಣ್ಣಾನ ಬೆಳಕೇನs ಮಾರ್ಯಾಗಿನ ತುಳುಕೇನ
ತುಟಿಯಾಗಿನ ಝುಳುಕೇನ
ಉಡುಗಿಯ ಮಾಟೇನs ನಡಿಗಿಯ ಥಾಟೇನ
ಹುಡುಗಿ ಹುಡುಗಾಟೇನ !

೨

ಕಂಡ್ಹಾಂಕಾಣsಲಿಲ್ಲ ಅಂದ್ಹಾಂಗನ್ನsಲಿಲ್ಲ
ಬಂದ್ಹಾಂಗ ಬರಲಿಲ್ಲಾ
ಚಂದಾನ ಒಂದೊಂದ ಆಂದೇನಿ ಬೇರೊಂದ
ಅರಿವನs ಇರಲಿಲ್ಲ !

೩

. ಬಡತನದ ಬಲಿಯಾಗ ಕರುಳಿನ ಕೊಲಿಯಾಗ
ಬಾಳ್ವಿಯ ಒಲಿವ್ಯಾಗ
ಮುಟ್ಟು ಹಪ್ಪಳದ್ಹಾಂಗ ಸೊರಗಿದ ಸೊಪ್ಪಿನ್ಹಾಂಗ
ಬಂತಂತ ಮುಪ್ಪ ಬ್ಯಾಗ !

ಬಿಸಿಲುಗುದುರೆ

೪

ಕಣಕಣ್ಣಾ ನೆನಸೇನ ಮನಸಿಲೆ ಬಣಿಸೇನ
ಕಂಡೀತೆಂತೆಣಿಸೇನ
ಬಿಸಿಲುಗುದುರೀ ಏರಿ ನಿನ ನಗೆಯು ಸವ್ವಾರಿ
ಹೊರಟಿತ್ತು ಕನಸೇನ ?

೫

ಮುಂಗಾರಿ ಕಣಸನ್ನಿ ಹಾಂಗ ನಿನ ನಗಿ ಚೆನ್ನಿ
ಮುಂಚ್ಯೊಮ್ಮೆ ಮಿಂಚಿತ್ತ
ನಿನ ಮಾರಿ ಸಿಟ್ಟಿಗೆ ಹಚ್ಚಿ ದಿಟ್ಟದಿಟ್ಟಿಗೆ
ನೋಡ್ತೇನಿ ನಾನಿತ್ತ !

೬

ನಕ್ಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತ
ಹಳ್ಳದ ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತಽ
ಏನೊಂದು ನಗಿ ಇತ್ತ ಏಸೊಂದು ನಗಿ ಇತ್ತ
ಏರಿಕೆ ನಗಿ ಇತ್ತ !!

೪೬. ನನ್ನ ಕೈಯು ಹಿಡಿದಾಕೆ !

೧

ನನ ಕೈಯ ಹಿಡಿದಾಕೆ ಅಳು ನುಂಗಿ ನಗು ಒಮ್ಮೆ
ನಾನೂನು ನಕ್ಕೇನಃ
ಇಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ-
ಹುದುಲಾಗ ಸಿಕ್ಕೇನಃ

೨

ಜಗದಾಗ ಯಾವಾವ ನೆರಳು ಬೆಳಕಿನಾಗ
ಹಗಲಿರುಳು ಇದ್ದಾವಾ
ಎದ್ದೇನಃ ಬಿದ್ದೇನಃ ಕತ್ತಲು ಬಿಸಲೇನ
ನಕ್ಕಾವಾ ಗೆದ್ದಾವಾ !

೩

ಹುಸಿನಗುತ ಬಂದೇವ ನಸುನಗುತ ಬಾಳೋಣ
ತುಸುನಗುತ ತೆರಳೋಣ
ಬಡ ನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರೆ ಕೆರಳೋಣ !

೪

ಬಡತನ ಒಡೆತನ ಕಡೆತನಕುಳಿದಾವೇನ
ಎದೆಹಿಗ್ಗು ಕಡೆಮುಟ್ಟ
ಬಾಳಿನ ಕಡಲಾಗ ಅದನ ಮುಳುಗಿಸಬ್ಯಾಡ
ಕಡೆಗೋಲು ಹಿಡಿಹುಟ್ಟ !

ನನ್ನ ಕೈಯು ಹಿಡಿದಾಕೆ!

೫

ನನ ಕೈಯು ಹಿಡಿದಾಕೆ ಅಳು ನುಂಗಿ ನಗು ಒಮ್ಮೆ
ನಾನೂನು ನಕ್ಕೇನಃ
ಇಂದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ-
ಹುಡುಲಾಗ ಸಿಕ್ಕೇನ !

೪೭. ಪ್ರೀತಿ

ಪ್ರೀತಿ ಎಂಬ ಮಾತ ಕೇಳಿ
ರೆಕ್ಕೆಗೊಂಡು ಹಾರಿತು,
ರೆಕ್ಕೆಗೊಂಡು ಸಾರಿ ಜೀವ
ಕೈಲಾಸಕೇರಿತು—
ಭೂತಗಣದ ಮೇಳದಲ್ಲಿ
ಮಹಾ ಕಾಳದಾಳದಲ್ಲಿ
ಸತಿಪತಿಯರ ಜೋಡಿಯೊಂದು
ಕುಣಿಯುವದನು ಕಂಡಿತು;
ಬೂದಿಬಡಕ ಗಂಡಿನಲ್ಲಿ
ಬಳ್ಳಿಯಂಥ ಮಳ್ಳ ಹೆಣ್ಣು
ನವರಸವನ್ನುಂಡಿತು:
ತಬ್ಬಿ ಉಬ್ಬಿ ಕೆಲೆದು ನೆಗೆದು
ಗಂಡ ಕೆಡಹಿ ಕುಣಿದಿತು,
ತುಳಿದು ತುಳಿದು ದಣಿದಿತು:

* * *

ಏನು ಕಂಡೆ ಎಂದು ಕಣ್ಣು
ತಾನೆ ಮುಚ್ಚಿಕೊಂಡಿತು
ಪ್ರೀತಿಯು ಕಣ್ಣಾರೆ ಕಂಡು
ಮನವು ಬೆಚ್ಚಿ ಬೆದರಿತು
ಮೈಯೆಲ್ಲ ಅದುರಿತು:
ಹೆ, "ಪ್ರೀತಿ ಪ್ರೇತ
ಮಹಾಭೂತ!"
ಭೀತಿಯಿಂದ ಚೀರಿತು,
ಹಾಗೆ ನೆಲಕೆ ಜಾರಿತು.

೪೮. ಚಳಿಯಾಕೆ

ಸೀಗೆ ಹುಣ್ಣಿವೆ ಮುಂದೆ
ಸೋಗಿನ ಚಂದ್ರಮ
ಸಾಗಿಬರುವೊಲು ಬರುವ ಚಳಿಯಾಕೆ.
ಹೊನ್ನ ಸೇವಂತಿಗೆಯು
ಹೆರಳು ಬಂಗಾರದ
ಬೆಳ್ಳಿ ಸೇವಂತಿಗೆಯು ಬಳಿಯಾಕೆ.

ಮುಗಿಲಲಲ್ಲಾಡುವ
ಬಾವಿಲಿ ಮಲ್ಲಿಗೆ
ಕಿವಿಗೊಪ್ಪ ಓಲೆಕೊಪ್ಪ ಚಳತುಂಬ.
ಹೊಳೆಹೊಂಡದುಸಿರನ್ನೆ
ನಯವಾಗಿ ನೆಯ್ದಂಥ
ಮಂಜಿನ ಮೇಲ್ಸೆರಗು ಮೈತುಂಬ.

ಹೊಂಗಡಲು ಹೊಯ್ದಾಡಿ–
ದೊಲು ನೆಲ್ಲು ತಲೆದೂಗೆ,
ಅದರಲ್ಲಿ ಬಾ ಸುಮ್ಮನೀಸಾಡಿ.
ಕ್ರನೆಹಾಲು ದಕ್ಕಲಿ
ಕಕ್ಕಿಸಬೇಡದನು
ನಿನ್ನ ನಂಜಿನ ಸೆರಗ ಬೀಸಾಡಿ.

ಕಣ್ಣಿಗೆ ಕಾಣದೆ
ಮೈಮುಟ್ಟಿ ತುಟಿಮುಟ್ಟಿ
ನಿಸುಕದೆ ಮುಸುಕಿಗೆ ಹೋಗುವಾಕೆ.

ಅಡಿಗೊಮ್ಮೆ ನಡುನಡುಗಿ
ಇರುಳ ಬೆಳದಿಂಗಳಕೆ
ಬಿಳಿಮೋಡ ನಗುವಂತೆ ನಗುವಾಕೆ.

ಉಸುರುಸುರಿಗೆ ಮರುಕ
ಹೆಜ್ಜೆ ಹೆಜ್ಜೆಗೆ ಬೆಡಗು
ಮೆಲ್ಲಗೆ ಮುಂಗಯ್ಯ ಹಿಡಿವಾಕೆ.
ಯಾವ ಜಾತಿಯ ಹೆಣ್ಣೊ
ಹಾವ ಭಾವವೆ ಭೇರೆ
ಅಪ್ಪಿದ ಅಪ್ಪಿಗೆ ಬಿಡದಾಕೆ.

೪೯. ಕೂಸು ಬಿನ್ನಾಣ

೧

ನೋಡಿ ನಲಿವವರಿದಿರು ಆಡುವದು ಬಲು ಸೊಗಸು
ನೋಟಕರು ಇರದ ಬಯಲಾಟ ಮರುಳಾಟ
ಬರಿಯ ನರಳಾಟ ಹುಸಿಕಾಟ.

೨

ಕೂಸೆ ನಿನ ಕಂಡಂತೆ ತಿಳಿವೆಲ್ಲ ಅರೆಮರೆವು
ನಗು ಕಾಟ ಅಳುವು ಹಿರಿದಾಟ ಕುಡಿನೋಟ
ಮೋಸ ನುಸುಳಾಟ ತಿರುಮುರುವು.

೩

ಕಂದ ಕಾಡಿದರೇನ ಕೆನೆಹಾಲು ಕುಡಿದಂತ
ಆಡಿದರ ಮಾತನಾಡಿದರ ಹಾಡಿದರ
ಉಂಟೆ ಬೇರೊಂದು ಆದರಂತ.

೪

ಎಲ್ಲಿ ಕಡಲಿನ ಉಪ್ಪು ಎಲ್ಲಿ ಕಾಡಿನ ನೆಲ್ಲಿ
ಸವಿಕೂಟ ಕೂಡಿಬಂದಲ್ಲಿ ನನ್ನಲ್ಲಿ
ರುಚಿಗೊಡುವಿ ಕಂದ ಬಂದಿಲ್ಲಿ.

೫

ಹೂವುಗಳ ತೂಗಾಟ ಹಕ್ಕಿಗಳ ಕೂಗಾಟ
ಹಸುಮಕ್ಕಳಾಟ ಕೂಸಾಟಗಳ ನೋಟ
ತೆರೆದಂತೆ ಅಮರವತಿ ತೋಟ.

ಕೂಸು ಬಿನ್ನಾಣ

೬

ಆಡು ಕುಣಿ ನಗು ಹಾಡು ಹಾರಾಡು ಎಲೆ ಕಂದ
ನಿನ್ನದೆಂಬುವದು ಬಲು ಚೆಂದ ಆನಂದ
ಜೇನುರಸ ಹಾಲು ಮಕರಂದ.

೭

ನಸುನಗೆಯೊ ಹುಸಿಮುನಿಸೊ ಏನು ಸವಿಸವಿಗನಸೊ
ತಿಳಿಸೊ ತಿಳಿಸೆನಗೆ ತಿಳಿತಿಳಿಸು ತುಸ ತಿಳಿಸು
ಬೆಳೆಯುವದು ಎಲ್ಲಿ ಈ ಬೆಳಸು.

೮

ತೊದಲಾಟ ಒಂದಂದ ತಪ್ಪಡಿಯು ಬಲು ಚೆಂದ
ನಿನ್ನ ಹಗರಣಕೆ ಇದು ಸಾಜ ಸನ್ನೋಜ
ಕಲಿಸಿದನು ಬಾಲ ನಟರಾಜ.

೯

ಏಸುಸಲ ನೋಡಿದರು ಆಸುಸಲ ಹೊಸ ಹೊಸದು
ಅದು ಏನು ಮುದ್ದೊ ಮೆಚ್ಚುಮದ್ದೋ
ತಿಳಿದವಗು ತೀರ ತಿಳಿಯದ್ದು.

೧೦

ಹಿಗ್ಗಿನಾ ಸುಳಿಹಿಡಿದು ಉಗ್ಗುಗಿಗ್ಗಿ ಬರುತಿರುವೆ
ಅರಿದರಿದೊ ರಸಿಕ! ಕಡುಜಾಣ! ಕಂದಯ್ಯ!
ಹಿರಿ ಹಿರಿದೊ ಕೂಸುಬಿನ್ನಾಣ.

೫೦. ಕೆಲಸವಿಲ್ಲದವರ ಹಾಡು

೧

" ಹೂ ಆ ಹೂ ಆ ಹೂ ಆ ಹೂ ಆ
ಅಹಮಹಮನ್ನಂ ಅಹಮನ್ನಾದೋ
ಅಹಮನ್ನಾದಃ " ಇದುವೆ ಸುನಾದ
ಸಾಮವೇದದಾ ಸಾಮವೆ ಆಹಾ !
ಪ್ರಾಣದ ಗೀತ ಮಧುಸಂಗೀತ
ಹೇಳಲಿ ಸತ್ತವಿ, ಕೇಳಲು ಈ ಕಿವಿ
ಹುಟ್ಟಾ ತೆರೆದಿವೆ, ಹಸಿದಿಹವಿನ್ನೂ,
ಭವಿತವ್ಯತೆಯೋ ' ತಥಾಸ್ತು ' ಎನ್ನು;
ಎನ್ನೇ ಎನ್ನು—ಎನುತಿದೆ ಪ್ರಾಣ
ಉಳಿಯುವವರೆಗೆ ಕಂಠತ್ರಾಣ
ಆದರಿನ್ನು ತಿನ್ನುವದೇನನ್ನ ?
ಅನ್ನವೆಲ್ಲವೂ ಆಯಿತು ಚಿನ್ನ !
ನಾನೇ ನನ್ನನು ತಿನ್ನುವ ಅನ್ನ !
ತಿನ್ನಲಿ ಏನು ನಾ ನನ್ನನ್ನ ?
ಅನ್ನಃ ಅನ್ನಃ ಅನ್ನಃ ಅನ್ನಃ.

೨

ದೇವರ ಕಾಟವೊ ಮಾನವರಾಟವೋ
ಹತ್ತಿ ಬಿತ್ತಿ ಬೆಳಕೊಂಡೆವು ಹಾಳು
ತಿನ್ನಲು ಬೆಳೆಯದು ತುಸು ಕಡಿಕಾಳು
ಬಕ್ಕರಿಸುವದೋ ಹೆಂಟೆಯ ಕೂಳು ?
ಬತ್ತಿತು ಅನ್ನ ಹೊತ್ತಿತು ಚಿನ್ನ
ಚಂಚಲ ಲಕ್ಷ್ಮಿಯು ಕಟಾಕ್ಷದನ್ನ

ಕೆಲಸವಿಲ್ಲದವರ ಹಾಡು

ಹುಟ್ಟಿದ ಕೂಡಲೆ ಹಾರಿತೊ ಅಣ್ಣ.
ಮಾನವಮೂರ್ತಿ ಮತಿಸಂಪನ್ನ
ಹೊಟ್ಟೆಗೆ ಹಾಕಿದೆ ಚಿನ್ನದ ಕನ್ನ
ಹುಟ್ಟಿತಲ್ಲಿಯೇ ಹೊಟ್ಟೆಯ ಬನ್ನ
ಚಿನ್ನದ ಭಸ್ಮಾಸುರನ ಹರಕೆಯಿರೆ
ತತ್‌ಕ್ಷಣ ಬರುವುದು ಸಾವಿಗೆ ಅಕ್ಕರೆ
ಮಿಡಾಸ ಕೈಯನು ಹಚ್ಚಿದನೆಮಗೋ
ಎಡೆಮಾಡಿದನೊ ನಿವೇದಿಸಿ ಯಮಗೋ
ಅನ್ನಪೂರ್ಣೆಗಿದು ಪೂರ್ಣಾಹುತಿಯೋ
ಜೀವದ ಗತಿ ಹತಿಯಿಲ್ಲದ ಮೃತಿಯೋ ?
ಅನ್ನಃ ಅನ್ನಃ ! ಕಡಿ ಹೊನ್ನನ್ನ.

೨

ಕೃತಯುಗ ಬರಲಿದೆ ಎನ್ನುವ ಪ್ರಾಣಿ
ಕಾಲಭೈರವನು ಕೃಪಾಣಪಾಣಿ
ಬರುತಿಹ ತೆರೆದು ಮೂರೂ ಕಣ್ಣ
ಬಾರ್ರೈ ಬಣ್ಣದ ಮಾತಿನ ಅಣ್ಣ !
ಸುಖಸಾಮ್ರಾಜ್ಯದ ಕನಸಿಗ ನೀನು
ಅಟ್ಟೆ ಮುರಿಯುವೀ ಕುಣಿತವಿದೇನು ?
ಧಿಕತೋಂ ಧಿಕತ್ತೈ ನಡೆದಿದೆ ನೃತ್ಯ
ಕಟ್ಟಿದ ಜಗವನು ಕೆಡಿಸುವ ಕೃತ್ಯ.
ಹೊಟ್ಟೆ ತೋಡೆ ಹೊರಟಿತು ಬೇತಾಳ
ಮುಂದೆ ಕಳುಹಿದನೊ ಪ್ರಳಯದ ಕಾಳ
ಬರವ ತಿಳುಹಿಸಲು ಓಲೆಯ ಆಳ !
ಕುಣಿಯುತಲಿಹನವ ನಿಲ್ಲದೆ ತಾಳ.

ಕೆಲಸವಿಲ್ಲದವರ ಹಾಡು

ಹಾಡಿನ ನುಡಿ ನುಡಿ "ತಿನಲೇನನ್ನ"
ಮೇಲೆ ಪಲ್ಲವಿಯು "ಅನ್ನಃ ಅನ್ನ!"
ಎಲ್ಲಿದೆ ಅನ್ನ? ಎಲ್ಲವು ಚಿನ್ನ.

೪

ಏತರಾಸೆಯನೊ ಹೇಗೋ ಹಚ್ಚಿ
ಆಡುತಾಡುತಲೆ ಹಿಡಿದರು ಕಚ್ಚಿ
ತಲೆಯಲಿ ಮಾಟದ ಮುಳ್ಳನು ಚುಚ್ಚಿ
ನೆಲಮಾಳಿಗೆಯೊಳು ಕತ್ತಲೆ ಹೊಚ್ಚಿ
ಸೆರೆ ಹಿಡಿದರು ಎಲೆ ಚಿನ್ನದ ಹಕ್ಕಿ!
ಬೊಕ್ಕಸದುಕ್ಕಿನ ಬಾಗಿಲವಿಕ್ಕಿ
ಒಗೆದರು ಕೂಡಲೆ ರೆಕ್ಕೆಯ ಕಿತ್ತು
ಸುಮ್ಮನೆ ನೋಡುವೆ ಸುತ್ತೂ ಮುತ್ತು
ಹಕ್ಕಿಯೆ ನೀ ಸೆರೆಯಲಿ ಸಿಕ್ಕಿರಲು
ಧರ್ಮದ ಕೊರಳಿಗೆ ಅನ್ನದ ಉರಲು
ಅನಃ ಅನ್ನಃ ಪ್ರಾಣದ ಕೂಗು
ಪ್ರಳಯಕೆ ಔತಣ ಹಾಗೂ ಹೀಗೂ.
ಈ ಹಸಿವೆಯ ಕೊಲ್ಲುವ ಸುತ್ರಾಣ
ಎಲ್ಲಿದೆ ಎಲ್ಲಿದೆ ಬಿಲ್ಲೂ ಬಾಣ?
ಚಿನ್ನದ ಸೆರೆಯನು ಮೊದಲೇ ಬಿಡಿಸಿ!
ಅನ್ನಕಲ್ಪವೃಕ್ಷವ ಚಿಗುರಿಡಿಸಿ!
ಅಲ್ಲಿಯುವರೆಗೂ ಅನ್ನಃಅನ್ನಃ!
ಒಂದೇ ಹಾಡು ಕೇಳಲೆ ಚಿನ್ನ.

೫೧. ನನ್ನ ಹಾಡು

ನನ್ನ ಹರಣ
ನಿನಗೆ ಶರಣ
ಸಕಲ ಕಾರ್ಯಕಾರಣಾ
ನಿನ್ನ ಮನನ-
ದಿಂದ ತನನ-
ವೆನುತಿದೆ ತನು ಪಾವನಾ.

ಸುಖದ ಮಿಷವು
ದುಃಖ ವಿಷವು
ಹಿಗ್ಗಿ ಪ್ರಾಣ ಪೂರಣಾ
ಪಂಚಕರಣ-
ಗಳೀ ಗಡಣ
ಕಟ್ಟಿತು ಗುಡಿ ತೋರಣಾ.

ನಿನ್ನ ಚರಣ
ಸುಸಂತರಣ
ಜಗದ್ಭರಿತ ಭಾವನಾ
ಹಾಸ್ಯ ಕಿರಣ
ತದನುಸರಣ
ತದಿತರ ಪಥ ಕಾಣೆ ನಾ.

ನನ್ನ ಹಾಡು

ಹರುಷ ರಸವೆ
ಕರುಣದಸುವೆ
ಜೀವಧರ್ಮಧಾರಣಾ.
ರಸವೆ ಜನನ
ವಿರಸ ಮರಣ
ಸಮರಸವೇ ಜೀವನ.

೫೨. ರುದ್ರವೀಣೆ

ಯಾಕೊ ಕಾಣೆ
ರುದ್ರವೀಣೆ
ಮಿಡಿಯುತಿರುವದು.
ಜೀವದಾಣೆ–
ಯಂತೆ ತಾನೆ
ನುಡಿಯುತಿರುವದು.

ತಂತಿ ಮಿಂಚಿ ನಡುಗುತಿವೆ
ಸೊಲ್ಲು ಸಿಡಿದು ಗುಡುಗುತಿವೆ
ಮಿಡಿವ ಬೆರಳು ಅಡಗುತಿವೆ
ಮುಗಿಲ ಬಯಲಲಿ.

ಚಿಕ್ಕೆ ಬಾಲ ಬೀಸುತಿವೆ
ಸೂರ್ಯ ಚಂದ್ರ ಈಸುತಿವೆ
ಹೊಸ ಬೆಳಕನೆ ಹಾಸುತಿವೆ
ಕಾಲಪಥದಲಿ.

ನೆಲದ ಬಸಿರೊಳುರಿಯುತಿದೆ
ಬೆಟ್ಟದೆದೆಯು ಬಿರಿಯುತಿದೆ
ನೀರು ಮಾರಿ ಹರಿಯುತಿದೆ
ಕೆಂಪು ನೆಲದಲಿ.

ಧರ್ಮಾಸನ ಹೊರಳುತಿವೆ
ಸಿಂಹಾಸನ ಉರುಳುತಿವೆ

ರುದ್ರವೀಣೆ

ಜಾತಿಪಂಥ ತೆರಳುತಿವೆ
ಮನದ ಮರೆಯಲಿ.

ಗಂಡು ಹೆಣ್ಣು ಕೆರಳುತಿದೆ
ಜೇನೆ ತಿನುತ ನರಳುತಿದೆ
ಸಾಯಲಾರದಳುತಿದೆ
ಬರುವ ಹಗಲಲಿ.

ಯಾಕೊ ಕಾಣೆ ರುದ್ರವೀಣೆ
ಮಿಡಿಯುತಿರುವದು.
ಜೀವದಾಣೆಯಂತೆ ತಾನೆ
ನುಡಿಯುತಿರುವದು.

೫೩. ಯುಗಾದಿ

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ.

ಹೊಂಗೆಹೂವ ತೊಂಗಲಲ್ಲಿ
ಭೃಂಗದ ಸಂಗೀತಕೇಲಿ
ಮತ್ತೆ ಕೇಳಬರುತಿದೆ.
ಬೇವಿನ ಕಹಿಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ.

ಕಮ್ಮನೆ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ.
ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯು ಸಾಲು ಸಾಲು
ತೋರಣದೊಲು ಕೋದಿದೆ.

ವರುಷಕೊಂದು ಹೊಸತು ಜನ್ಮ
ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವಜಾತಕೆ !
ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ ?

ನಿದ್ರೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೋ ?
ಎಲೆ ಸನತ್ಕುಮಾರದೇವ !
ಎಲೆ ಸಾಹಸಿ ಚಿರಂಜೀವ !
ನಿನಗೆ ಲೀಲೆ ಸೇರದೋ ?

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ
ನಮ್ಮನಷ್ಟೆ ಮರೆತಿದೆ !

೫೪. ಕುಣಿಯೋಣು ಬಾರಽ

(ಒಂದು ನಲ್ವಾಡು)

ಕುಣಿಯೋಣು ಬಾರಽ
    ಕುಣಿಯೋಣು ಬಾ   ॥ ಪಲ್ಲ ॥

೧

ಆ ಕಾಗಿ
    ಯಾಕಾಗಿ
        ಕುಣಿಯೋದು ಬೇಕಾಗಿ
            ಇಲ್ದ ಬಣ್ಣದ ಸೋಗಿ । ಕುಣಿ....
ಹಿಗ್ಗ ಹಾಕಿತು ಕ್ಯಾಕಿ
    ಇರಲಾರೆನೇಕಾಕಿ
        ಬಾ, ಬಾರಽ ನನ್ನಾಕಿ । ಕುಣಿ....

೨

ಕೂಡೀಕಿ
    ಹೂಡೀಕಿ
        ಮುಪ್ಪತ್ತ ದೂಡೀಕಿ
            ಹಣ ಬಾಕಿ ಹೆಣ ಬಾಕಿ । ಕುಣಿ....
ಏಸೊಂದು ಎಣಿಸ್ಯಾಟ
    ಕಾಸಿನ ಕುಣಿಸ್ಯಾಟ
        ಸಾಕಾತು ಸೆಣಿಸ್ಯಾಟ । ಕುಣಿ....

ಕುಣಿಯೋಣು ಬಾರಾ !

ಕಲಿಕಿಯು ಕಾಲ್ಯಾಕ
ಹಿಗ್ಗಿಲೆ ನಡಿ ಸಾಕ | ಕುಣಿ....
ಘಾಳೇನು ತೀಡ್ಯಾವು
ನವ್ಯಾಂಗ ಆಡ್ಯಾವು
ಈ ಕುಣಿತ ಬೇಡ್ಯಾವು | ಕುಣಿ....

೯

ತಾಳ್ಯಾಕ
ತಂತ್ಯಾಕ
ರಾಗದ ಚಿಂತ್ಯಾಕ
ಹೆಜ್ಜ್ಯಾಕ ಗೆಜ್ಜ್ಯಾಕ | ಕುಣಿ....
ಕುಲುಕಿಸಿ ಕೈ ಕೈ
ಮುಲುಕಿಸಿ ಮೈ ಮೈ
ಥಕ ಥಕ ಥೈ ಥೈ | ಕುಣಿ....

೧೦

ಸೆರಗಿಲ್ಲ
ಬೆರಗಿಲ್ಲ
ಹೆದರೀಕಿ ಹೊರಗಿಲ್ಲ
ಮರಗಿಲ್ಲ ಕೊರಗಿಲ್ಲ | ಕುಣಿ....
ನಾಚೀಗಿ–ಗೀಚೀಗಿ
ಕಳೆದೊಗೆದಾಚೀಗಿ
ಬೀಸಾಗಿ ಈಚೀಗಿ | ಕುಣಿ....

೧೧

ಕಾಗುಣಿತ
ಬರಿಗಣಿತ
ಯಾಕ ಡೊಂಬರ ಮಣಿತ
ಸುಗ್ಗಿಯ ಸಿರಿಕುಣಿತ । ಕುಣಿ....
ತರಗೆಲಿ ಜಿಗಿಧಾಂಗ
ಚಿಗುರೆಲಿ ಚಿಗಿತ್ಹಾಂಗ
ನನಿಕೊನೆ ಮುಗಿಧಾಂಗ । ಕುಣಿ....

೧೨

ಚಕಚಕ
ಚಂಚಲ
ಮಿಂಚಿನ ಗೊಂಚಲ
ಚಕಮಕಿ ಚಲಮಲ । ಕುಣಿ....
ಹೊಂಗ್ಯಾದಿಗಿ ಹೊಡಿ
ಮಿಡಿನಾಗರ ಹೆಡಿ
ಹಾಂಗೊಮ್ಮೆ ತೂಗಾಡಿ । ಕುಣಿ....

೧೩

ಕುಡಿಗಣ್ಣು
ನಗೆಗಣ್ಣು
ಚುಚ್ಚ್ಯೋಣು ಬಿಚ್ಚ್ಯೋಣು
ತೇಲ್ಗಣ್ಣು ಮುಚ್ಚ್ಯೋಣು । ಕುಣಿ....

ಕುಣಿಯೋಣು ಬಾರಾ !

ಕಣಕಣ್ಣ ಹೆಣಿಯೋಣು
ಸೆಳೆದತ್ತ ಮಣಿಯೋಣು
ಮೈಮರಿಯೆ ದಣಿಯೋಣು । ಕುಣಿ....

೧೪

ಚಿಗರ್‍ಯಾಗಿ
ತ್ರಿಗರ್‍ಯಾಗಿ
ನಿದ್ದಿಯು ಭಗರ್‍ಯಾಗಿ
ಗಾಳೀಗು ಹಗುರಾಗಿ । ಕುಣಿ....
ಕೈ ಮೈ ಬೀಸಾಡಿ
ಇಳಿಗೂದಲೀಸಾಡಿ
ಬೆವರ್ಹನಿ ಸೂಸಾಡಿ । ಕುಣಿ....

೧೫

ಗರಿಗರಿ
ಗಿರಿಗಿರಿ
ಹಿಗ್ಗಿಗ್ಗಿ ಹಿರಿಹಿರಿ
ಸೈಸೈ ಸರಿಸರಿ । ಕುಣಿ....
ಗುಡ್ಡಾ ತಲೆದೂಗಲಿ
ಹೊಳಿಹಳ್ಳಾ ನೂಗಲಿ
ದರಿಕೊಳ್ಳಾ ಕೂಗಲಿ । ಕುಣಿ....

೧೬

ನೆಲದೊಡಲು
ಕುಣಿಯಲು

ಕುಣಿಯೋಣು ಬಾರಽ !

ಕುಣಿಕುಣಿದಿತು ಕಡಲು
ಮಿಡಿದಿತು ಸಿಡಿಸಿಡಿಲು । ಕುಣಿ....
ಹಗಲಿರಳ ತಾಳಕ್ಕ
ಮುಗಿಯದ ಕಾಳಕ್ಕ
ಜನುಮಗಳ ಮ್ಯಾಳಕ್ಕ । ಕುಣಿ....

೧೭

ಹುಲ್ನೆಲಾ
ಸ್ಥಿರಜಲಾ
ಚಿಕ್ಕೆಲ್ಲಾ ಮುಗಿಲೆಲ್ಲಾ
ಕುಣಿಶಿಲ್ದ ಜಗ ಇಲ್ಲಾ । ಕುಣಿ....
ಕುಣಿತಕ್ಕ ಇತಿ ಇಲ್ಲ
ಕುಣಿತಕ್ಕ ಮಿತಿ ಇಲ್ಲ
ಬೇರೊಂದು ಗತಿ ಇಲ್ಲ । ಕುಣಿ....

೧೮

ಅಂಗಲು
ಅಂಗಲು
ಚಿಕಿಚಿಕ್ಕಿ ತಿಂಗಳು
ಉಸಿರಾಸೆ ಹಿಂಗಲು । ಕುಣಿ....
ನೆಲ ಮುಗಿಲನಪ್ಪಿತು
ಚೆಲುವಾಗಿ ಒಪ್ಪಿತು
ಸಾವೊಮ್ಮೆ ತಪ್ಪಿತು । ಕುಣಿ....

೧೯

೭ ಜ್ಞಾನ—
    ಸಾಗರ—
        ಸಾನಂದಸಾಗರ
            ತೆರಿ ತೆರಿ ತೆರದರ । ಕುಣಿ....
ಹದಿನಾಲ್ಕು ಲೋಕಕ್ಕ
    ಚಿಮ್ಮಲಿ ಈ ಸುಖ
        ಹಿಗ್ಗಲಿ ಸಿರಿಮುಖ । ಕುಣಿ....

೫೫. ಗರಿ

ಎಲ್ಲಿಕಟ್ಟು ಇಲ್ಲದಾ
ಬಾನಬಟ್ಟೆಯಲ್ಲಿದೊ
ಎಂಽಪೆಂದು ಹಾರುವೀ
ಹಕ್ಕಿ–ಗಾಳಿ ಸಾಗಿದೆ.

ಅದರ ಹಾಗೆ ಸಾಗಿದಾ
ಹಾರುಪಂಥ ಹಕ್ಕಿಯು
ಜಾಡು ಹಿಡಿದು ನಡೆದಿವೆ
ಉದುರಿದಂಥ ಗರಿಗಳು.

ಸುಳಿದು ತೀಡಿ ಹರಿಯುವಾ
ಸೂಸಿ ಸೂಸಿ ಬೀಸುವಾ
ಗಾಳಿ ಪಕ್ಕದಲ್ಲಿವು
ಮಾಡುತಿರಲಿ ಕ್ರೀಡೆಯಾ.

ಅಪ್ಪಿ ತಪ್ಪಿ ನೆಲದಲಿ
ಬಂದು ಇಳಿದರಿವುಗಳ
ಊದಿ ತೂರಿ ಹಾರಿಸು
ಮತ್ತೆ ಮೇಲೆ ಮುಗಿಲಲಿ.

ಬೆರಗುಬಟ್ಟು ಬಣ್ಣಕೆ
ಮುಚ್ಚಿ ಇಡದಿರಿವುಗಳ,
ಕೆಡುಕು ಆಗಿ ಕಂಡರೂ
ಕೀಳಬೇಡ ರೋಮವ.

೧೭. ನಾಡಿನ ಸ್ವಾತಂತ್ರ್ಯವನ್ನೇ ಹಾಡಿನ ಸ್ವಾತಂತ್ರ್ಯವನ್ನಾಗಿ ಕಂಡು ಪ್ರಾರ್ಥಿಸಿದ್ದು.

೧೮. "ಕಲ್ಯಾಣದ ಕಲ್ಯಾಣಿ" ಎಂಬ ನನ್ನ ಅಲಿಖಿತ ನಾಟಕದೊಳಗಿನ ಒಂದು ಹಾಡು. ಕಲ್ಯಾಣಿ ನಾಯಕನಾದ ಮುದ್ದಯ್ಯನಿಗೆ ಹೇಳಿದ ಮಾತು "ರಾಧೆಯ ಹಾಡು" ("ಸಖೀಗೀತದಲ್ಲಿ") ಕಲ್ಯಾಣಿಯ ಇನ್ನೊಂದು ಹಾಡು.

೧೯. ಒಳ ಜೀವವನ್ನು ಕುರಿತು ಹಾಡಿಕೊಂಡದ್ದು. ಒಂದು ತೊಡಕಿನ ಪ್ರಶ್ನೆ.

೨೦. ಕನಸಿನಲ್ಲಿ ಕಂಡ ಕಣಸಿನ ಕನ್ನಡ ತಾಯಿಯೊಡನೆ ಕನ್ನಡಿಗನ ವಾದ-ಸಂವಾದ.

೨೧. ದಿನದಿನಕ್ಕೆ ಜೀವನ ಹೊಸದಾಗುವದು. ಅದಕ್ಕೆ ಹೊಸ ಹಾಡು ಹೊಸ ಸಾಹಿತ್ಯ ಬೇಕೇ ಬೇಕು.

೨೨. ಕನ್ನಡ ನಾಡಹಬ್ಬದ ಉಗ್ಗಡಣೆಗಾಗಿ ಬರೆದದ್ದು.

೨೩. ಮೊದಲ ಪಂಪ ದಿನೋತ್ಸವಕ್ಕಾಗಿ ಅವನ ಮೂರ್ತಿಮತ್ತ ಕವಿತ್ವ ನೆನೆದು ಅವನ ಕೆಚ್ಚು ಕಾಣ್ಕೆಗಳಿಗಾಗಿ ಅಭೀಪ್ಸಿಸಿ ಬರೆದದ್ದು.

೨೪. ಒಂದು ನಾಯಿಯ ದುಃಖವನ್ನೂ ಕಂಡು ಕೇಳಿ ಕೂಡ ಒಮ್ಮೊಮ್ಮೆ ಮಾನವನ ಕಲ್ಲೆದೆ ಕರಗುವದಿಲ್ಲವಲ್ಲ ಎಂಬ ಕನಿಕರದಿಂದ ಬಂದ ಹಾಡು. ನಾಯಿಯೊಡನೆ ಭಾಗಾದಿಯಾಗುವ ಜೀವ ಮಾನವನೊಡನೆ ದಾಯಾದಿಯಾಗದೆ ಉಳಿದೀತೆ?

೨೫. ಗತಿಸಿದ ಮಗು ಭಾಸ್ಕರನಿಗಾಗಿ ಬರೆದದ್ದು.

೨೬. ಮೂವತ್ತು ಮೂರು ಕೋಟಿ ಈಗ ೪೦ ಕೋಟಿಯೋ ಹೆಚ್ಚೋ ಕಡಿಮೆಯೋ ಆಗಿದ್ದರೂ ಹಾಡೂ ಅದೇ; ಪಾಡೂ ಅದೇ.

೨೭. ಪಾಂಡುರಂಗನ ಹುಟ್ಟುಹಬ್ಬದ ಹರುಷದಲ್ಲಿ ಬಂದ ಹಾಡು.

೨೮. ಕಾಲಪಕ್ಷಿಯು ರೆಕ್ಕೆಹೊಡೆತಕ್ಕೆ ಮಾನವನ ವಿಶ್ವದಲ್ಲಾಗುವ ವೈಚಿತ್ರ್ಯದ ವಿಸ್ಮಯದಲ್ಲಿ ಬಂದ ಉದ್ಗಾರವಿದು.

೨೯. ಅನ್ನ ದೊರೆಯದ್ದಕ್ಕಾಗಿ ಒಂದು ಹೊಟ್ಟೆಯೂ ಉರಿಯುತ್ತಿರುವ ವರೆಗೆ ಈ ಹಾಡು ತಪ್ಪಿಲ್ಲ.

೩೦. ಜೀವನದೊಳಗಿನ ಜೀವಂತ ವಿರಹದ ಒಂದು ಪ್ರೇಮಗೀತ. ವಿರಹಿ ಕೋಕಿಲ; ಉಲ್ಲಾಸಿ ನವಿಲು.

೩೧. ರಾಗರತಿಯು ನಂಜೇರಿದ ಹಾಡು.

೩೨. ಪ್ರಾಣಿದಯಾ ಸಂಘದವರು ಪಶುಬಲಿಯನ್ನು ನಿಲ್ಲಿಸುತ್ತಿದ್ದಾರೆ. ಯಾವುದಾದರೂ ನರದಯಾ ಸಂಘದವರು ನರಬಲಿಯನ್ನು ನಿಲ್ಲಿಸಲಾರರೆ? ಪಶುಬಲಿಗೆ ಹೀನ ದೈವಗಳು ಮೆಚ್ಚುವವು. ನರಬಲಿಯನ್ನು ಬೇಡುವ ಯುದ್ಧವೆಂಬ ದೈವ ಮಾನವನ ಮನದ ಯಾವ ನೀಚಲೋಕದಿಂದ ಬಂದಿ

ದೆಯೋ? ನರಬಲಿ ನಿಲ್ಲಿಸುವ ಯುದ್ಧ ಬರಲಿ. ಅದು ನಮ್ಮ ಕುರು ಕ್ಷೇತ್ರ.

೩೩. ಜೀವಂತ ವಿರಹದ ಇನ್ನೊಂದು ಪ್ರೇಮಗೀತ.

೩೪. ಮಾನವ ತಪಸ್ವಿಯನ್ನು ಪಶುಲೋಕಕ್ಕೆ ದೂಡುವ ಚಿಂತೆ ತ್ರಿಶಂಕು ಸ್ವರ್ಗದೊಳಗಿನ ಅಪ್ಸರೆ. ವಿಶ್ವಾಮಿತ್ರ-ಸೃಷ್ಟಿ.

೩೫. ಹೂ ಎಂಬ ಶಬ್ದಾರ್ಥದಲ್ಲಿ ಹುದುಗಿದ ಭಾವವನ್ನು ಕಲ್ಪನಾವಲ್ಲರಿಯಾಗಿ ಇಲ್ಲಿ ಹಬ್ಬಿಸಿದೆ.

೩೬. ಬಾಳುವೆ ಒಂದು ಅಸಿಧಾರಾವ್ರತ ಇದ್ದಂತೆ. ನಿಜವಾಗಿ ಪೂರ್ಣವಾಗಿ ಬಾಳಬಲ್ಲ ಗಂಡಸು ದೇವ ಸದೃಶ.

೩೭. ಇರುವ ಮೈಸೂರನ್ನು, ಬೆಳೆವ ಮೈಸೂರನ್ನು ಎರಡು ಬಗೆಯಲ್ಲಿ ಕಂಡ ಕಾಣ್ಕೆ ಇಲ್ಲಿದೆ.

೩೮. ಕೃತಿಯನ್ನು ಹುಚ್ಚುಚ್ಚಾಗಿ ಮುರಿದರೆ ಅಣಕವಾಗುತ್ತದೆ. ಅಣಕವಾದು ನಿಜವಾಗಿ ಸ್ವಯಂಪೂರ್ಣ ಕೃತಿ. ಹಾರಬಲ್ಲ ಹಕ್ಕಿ ಹಾರುತ್ತದೆ. ಹಾರ ಬಯಸುವ ಬೆಕ್ಕು ಬೀಳುತ್ತದೆ.

೩೯. ಕೀರ್ತಿಯನ್ನು ಕುರಿತು ಮೂರು ಭಾವ-ಭಾವನೆಗಳು ಇಲ್ಲಿವೆ. ಒಂದು ಕೀರ್ತಿಯ ವಿರಾಟ್‌ರೂಪ. ಇನ್ನೊಂದು ಕೀರ್ತಿಯ ಉಸಿರು ಮತ್ತೊಂದು ಕೀರ್ತಿಯ ಸ್ವರ್ಗ.

೪೦. ಕೃಷ್ಣನಂಥ ಮುದ್ದಾದ ತರಳನನ್ನು ಕಂಡು ಗೋಪಿಯು ವಾತ್ಸಲ್ಯದಿಂದ ಬಂದ ಹಾಡು. ವೃಂದಾವನಕ್ಕೆ ಹೋದಾಗ ಬರೆದದ್ದು.

೪೧. ನನ್ನಿಬ್ಬರು ಗೆಳೆಯರನ್ನು ಆವರಿಸಿದ ನಿರಾಶೆಯನ್ನು ಅನುಭವಿಸಿ ಸಾನು ಭೂತಿಯಿಂದ ಬರೆದದ್ದು.

೪೨. ಅವರಿಬ್ಬರಲ್ಲಿ ಒಬ್ಬನು ತೀರಿಕೊಂಡಾಗ ಬರೆದದ್ದು. ಆವನ ಜೀವನದ ಆಯಾಸ ಮುಗಿಯಿತೆಂದು.

೪೩. ಮುಂಜಾವಿನಿಂದ ಸಂಜೆಯವರೆಗೆ ನಿರಂತರ ಚಾಂಚಲ್ಯದಲ್ಲಿ ಎಂಬಂತೆ ಬಾಳ ಬೆಳಗಿಸುವ ಪಾತರಗಿತ್ತಿ-ಚಿಟ್ಟೆಯ-ಜೀವನದ ವಿಸ್ಮಯವನ್ನು, ಚೆಲುವನ್ನು ಇಲ್ಲಿ ಮೂಡಿಸಿದೆ.

೪೪. ಜೀವನದ ಸಾಫಲ್ಯದಂತೆ ವೈಫಲ್ಯವನ್ನೂ ಗೀತಭಾವದಿಂದ ಅನುಭವಿಸಿ ದಾಗ ಬಾಳಿದ್ದೆಲ್ಲ ಕಿನ್ನರಿಯಾಗುತ್ತದೆ. ಒಂದು ಸಾಫಲ್ಯದಂತೆ ಕಾಣುತ್ತದೆ.

೪೫. ಮದುವೆಯು ಮೊದಲಿದ್ದ ನಗೆ ಬಾಳುವೆಯು ಉದ್ದಕ್ಕೂ ಕಂಡವರೆಷ್ಟು ಜನ? ಆ ಬಿಸಿಲುಗುದುರೆಯ ದಾರುಣ ಅನುಭವವನ್ನು ಪಡೆದ ತರುಣನು ಹಾಡಿ ಕೊಳ್ಳಬಹುದಾದ ಕವನ.

೪೬. ನಿರಾಶೆಯನ್ನು ಹೀಗೆ ಆಸೆಯತ್ತ ಹೊರಳಿದ ಬಾಳಬಳ್ಳಿಯು ಆಲಂಬನದ ಮಾರ್ಗ ಇಲ್ಲದೆ.

೪೭. ಪ್ರೀತಿಯೆಂಬ ಶಿವಧಾಮದ ಚಿದಂಬರದಲ್ಲಿ ಒಮ್ಮೊಮ್ಮೆ ತೋರುವ ರುದ್ರ ಕಾಳಿಯ ಲಾಸ್ಯ ತಾಂಡವದ ದೃಶ್ಯವು ಅದ್ಭುತಭಯಂಕರವಾಗಿದೆ.

೪೮. ಸೀಗೆಹುಣ್ಣಿಮೆಯ ಕಾಲದ ಚೆಲುವಿನ ಹಾಡು.

೪೯. ಬಾಲಲೀಲೆಯನ್ನು ಕುರಿತು ತ್ರಿಪದಿಗಳು.

೫೦. ಅನ್ನದ ಧರ್ಮ ಉದಯವಾಗುವವರೆಗೂ ಕೆಲಸವಿಲ್ಲದವರ ತಂಡ ರುದ್ರನ ಭೂತಗಣ. ತಿಳಿದಾಗ ಅವರು ಶಿವನ ಭಕ್ತರು.

೫೧. ಸಮರಸವೇ ಜೀವನ.

೫೨. ಯುದ್ಧ, ಭೂಕಂಪ ಧರ್ಮವಿಪ್ಲವಗಳಿಂದ ನಡುಗುತ್ತಿರುವ ಮಾನವ ವಿಶ್ವ ತನ್ನ ರೌದ್ರದಲ್ಲಿ ಒಂದು ವೀಣೆಯ ಗತಿಯನ್ನು ನುಡಿಸುವದು. ಶಾಂತಿ ಇದ್ದಲ್ಲಿ ಅದು ಕೇಳಿಸುತ್ತದೆ.

೫೩. ವನಸ್ಪತಿಸೃಷ್ಟಿಗೆ, ಹಕ್ಕಿಗಳಿಗೆ ವರುಷಕ್ಕೊಮ್ಮೆ ಋತುಮಾನ ಬದಲು. ಮಾನವನ ಜೀವನದಲ್ಲಿಯೋ ಮುಂದಿಟ್ಟ ಹೆಜ್ಜೆ ಮರಣದ ಕಡೆಗೆಯೇ.

೫೪. ಬಾಳು ಒಂದು ಕುಣಿತ. ತಿಳಿದು ಹಾಕಿದ ಒಂದು ಹೆಜ್ಜೆಯೂ ನೃತ್ಯ ವಿಧಾನ.

೫೫. ಹಕ್ಕಿಗೆ ಗರಿ ಇದ್ದಂತೆ ಕವಿಗೆ ಕವನ. ಬಲ್ಲವರು ಅದರೊಡನೆ ಆಡ ಬಹುದು.